ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಪ್ರಸ್ತಾವ. ಶ್ರೀಯುತ ಈಶ್ವರಪ್ಪನವರು ಸಭೆಯಲ್ಲಿ ಇಲ್ಲ. ಆದ್ದರಿಂದ ಶ್ರೀ ಬೈರೇಗೌಡರು ಪ್ರಾರಂಭ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೇ ಈಗ ಖಾಸಗಿ ನಿರ್ಣಯ ಬೇರೆ ಇದೆ. ಮಾನ್ಯ ರಾಜ್ಯಪಾಲರ ಭಾಷಣವನ್ನು ಶುರು ಮಾಡಿದರೆ ಆ ಖಾಸಗಿ ನಿರ್ಣಯದ ಗತಿ ಏನು? ಖಾಸಗಿ ಕಾರ್ಯಕಲಾಪಗಳಿಗೆ ತಾವು ಅವಕಾಶವನ್ನು ಮಾಡಿಕೊಡಬೇಕು. ಖಾಸಗಿ ಕಾರ್ಯಕಲಾಪಗಳಿಗೆ ಕೊನೆ ಮೂರು ನಿಮಿಷ ಇರುವಾಗ ರಾಗ ಎಳೆಯಿರಿ ಎಂದು ಹೇಳುತ್ತೀರಿ, ಆಮೇಲೆ ಹೊರಟು ಹೋಗಿ ಎಂದು ಹೇಳುತ್ತೀರಿ. ಅದಲ್ಲ, ಆದ್ದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏನೆಂದರೆ ಈ ದಿನ ಖಾಸಗಿ ಕಾರ್ಯಕಲಾಪಗಳಿಗೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಉಪ ಸಭಾಧ್ಯಕ್ಷಿಣಿಯವರು : ಮಾನ್ಯ ಬೈರೇಗೌಡರು ಸ್ವಲ್ಪ ಹೊತ್ತು ಮಾತನಾಡಲಿ. ಅವರು ಮಾತನಾಡುವುದಕ್ಕೆ ಮುಂಚೆ ಮಾನ್ಯ ಸಿಂಧ್ಯಾರವರು ಒಂದು ಅಮೆಂಡ್ ಮೆಂಟನ್ನು ಮೂವ್ ಮಾಡುತ್ತಾರೆ.

ತಿದ್ದುಪಡಿ ಮಂಡನೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೇ ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ತಮ್ಮ ಅಪ್ಪಣೆಯನ್ನು ಕೋರಿ ಮಂಡಿಸುತ್ತೇನೆ. At the end of the motion, the following be added:

"But regret that there is no mention in the Address about the drought situation in the State and rise in prices of essential commodities".

ಉಪಾಧ್ಯಕ್ಷರು : ತಿದ್ದುಪಡಿಯನ್ನು ಮಂಡಿಸಲಾಯಿತು. ಈಗ ಮಾನ್ಯ ಬೈರೇಗೌಡರು ಚರ್ಚೆಯನ್ನು ಪ್ರಾರಂಭಿಸಬಹುದು.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ರಾಜ್ಯದ ಸನ್ಮಾನ್ಯ ರಾಜ್ಯಪಾಲರು ಎರಡು ಸದನಗಳನ್ನು ದಿನಾಂಕ 1.3.1991ರಂದು ಉದ್ದೇಶಿಸಿ ಮಾಡಿದಂಥ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯವನ್ನು ನಾನು ವಿರೋಧಿಸಿ ನನ್ನ ವಾದವನ್ನು ಮಂಡಿಸುವುದಕ್ಕೆ ತಾವು ಅಪ್ಪಣೆ ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮಾನ್ಯ ಉಪಾಧ್ಯಕ್ಷಿಣಿಯವರೆ, ಯಾವುದೇ ಒಂದು ರಾಜ್ಯದ ರಾಜ್ಯಪಾಲರಾಗಿರತಕ್ಕವರು ರಾಜ್ಯಾಂಗದ ವಿಧಿಯಂತೆ ಎರಡು ಸದನಗಳನ್ನು ಕುರಿತು ತಮ್ಮ ಭಾಷಣವನ್ನು ಮಾಡುತ್ತಾರೆ. ಅದೇ ರೀತಿ ನಮ್ಮ ಸನ್ಮಾನ್ಯ ರಾಜ್ಯಪಾಲರು ಎರಡೂ ಸದನಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಈ ಭಾಷಣದಲ್ಲಿ ಆಡಳಿತ ಪಕ್ಷ ಅಥವಾ ಸರ್ಕಾರ ಎಂಬುದು ಯಾವುದು ಇರುತ್ತದೆ. ಅದು ಹಿಂದಿನ ವರ್ಷ ಮಾಡಿದಂತಹ ಸಾಧನೆಗಳ ಬಗ್ಗೆ ಮತ್ತು ಮುಂದಿನ ವರ್ಷ ಕೈಗೊಳ್ಳತಕ್ಕ ಅಭಿವೃದ್ಧಿ ಕಾರ್ಯಗಳ ಸೂಕ್ಷ್ಮವಾದಂಥ ಪರಿಚಯವನ್ನು ಕೊಡಬೇಕೆಂದು ಹಾಕಿಕೊಂಡಿರತಕ್ಕ ಸಂಪ್ರದಾಯ. ಅದು ಅಷ್ಟೇ ಅಲ್ಲದೆ, ರಾಜ್ಯದಲ್ಲಿರತಕ್ಕ ಕಾನೂನು ಸುವ್ಯವಸ್ಥೆಯ ಪರಿಸ್ಥಿತಿ, ಋತುಮಾನದ ಪರಿಸ್ಥಿತಿ ಮತ್ತು ಆರ್ಥಿಕ ಪರಿಸ್ಥಿತಿಯ ಬಗ್ಗೆ ಕೂಡ ಬೆಳಕನ್ನು ಚೆಲ್ಲಬೇಕಾಗಿರತಕ್ಕದ್ದರ ಬಗ್ಗೆ ಇದರಲ್ಲಿ ಉಲ್ಲೇಖ ಸಾಮಾನ್ಯವಾಗಿ ಇರುತ್ತದೆ. ಆದರೆ ಇವತ್ತಿನ ದಿವಸ ಈ

ಭಾಷಣದಲ್ಲಿ ಒಂದು ಅಕ್ಷಮ್ಯವಾದ ಲೋಪವನ್ನು ಈ ಸರ್ಕಾರ ಮಾಡಿದೆ. ಅಂದರೆ ಮಾನ್ಯ ರಾಜ್ಯಪಾಲರ ಬಾಯಿಂದ ಹೇಳಿಸಿದ್ದಾರೆ. ಅದೇನೆಂದರೆ ಈ ರಾಜ್ಯದಲ್ಲಿರತಕ್ಕ ಬರಗಾಲದ ಪರಿಸ್ಥಿತಿಯ ಬಗ್ಗೆ ಒಂದು ಮಾತನ್ನೂ ಕೂಡ ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ಸಾಮಾನ್ಯವಾದ ಸಂಪ್ರದಾಯ ಏನೆಂದರೆ ರಾಜ್ಯಪಾಲರು ಮಾಡಿರತಕ್ಕ ಭಾಷಣಕ್ಕೆ, ಸಾಮಾನ್ಯವಾಗಿ ಇತರ ಕಾರ್ಯಕಲಾಪಗಳು ಏನು ಇಲ್ಲಿ ಚರ್ಚೆಯಾಗಬೇಕಾಗಿದೆ, ಅದಕ್ಕಿಂತ ಹೆಚ್ಚಿನ ಮಹತ್ವವನ್ನು ನಾವು ಕೊಡಬೇಕಾಗುತ್ತದೆ. ಏಕೆಂದರೆ ಅವರು ರಾಜ್ಯಾಂಗದ ಮುಖ್ಯಸ್ಥರು. ಅವರು ಏನು ಹೇಳುತ್ತಾರೆ ಅಂದರೆ ಅವರು ಪ್ರಸ್ತಾಪ ಮಾಡಿರುವ ವಿಚಾರಗಳ ಬಗ್ಗೆ ಬೇರೆಲ್ಲ ಕಾರ್ಯಕ್ರಮಗಳಿಗಿಂತ ಹೆಚ್ಚಿನ ಘನತೆ ಗೌರವ ಕೊಡಬೇಕಾಗಿರತಕ್ಕದ್ದು ಸಂಪ್ರದಾಯ ಹಾಗೂ ಈ ಸದನ ರಾಜ್ಯಪಾಲರಿಗೆ ತೋರಿಸತಕ್ಕ ಔದಾರ್ಯ ಕೂಡ ಹೌದು. ಅದಕ್ಕಿಂತ ಹೆಚ್ಚಾಗಿ ನಾವು ಅವರ ಮೇಲೆ ಇಟ್ಟಿರತಕ್ಕ ವಿಶ್ವಾಸ ಕೂಡ ಹೌದು. ಆದರೆ ಇವತ್ತು ಈ ಪರಿಸ್ಥಿತಿ ಆಗಲಿಲ್ಲ. ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ ಬಳಿಕ ಈ ಸದನ ಚರ್ಚೆ ಮಾಡಿರತಕ್ಕ ವಿಚಾರ ಯಾವುದು? ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಯಾಗಲಿಲ್ಲ. ಈ ಸದನದಲ್ಲಿ ಚರ್ಚೆಯಾದದ್ದು ಯಾವುದೆಂದರೆ, ಈ ರಾಜ್ಯದಲ್ಲಿರತಕ್ಕ ಬರಗಾಲದ ಪರಿಸ್ಥಿತಿಯ ಬಗ್ಗೆ ಮತ್ತು ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ. ಸರ್ಕಾರ ಈ ರೀತಿ ನಡೆದುಕೊಂಡಿದ್ದು ನೋಡಿದರೆ ಇದು ಗೊತ್ತುಗುರಿ ಇಲ್ಲದಿರುವ ಸರ್ಕಾರ ಮುಂದಿನ ಆರ್ಥಿಕ ವರ್ಷದಲ್ಲಿ ಏನು ಮಾಡಬೇಕೆಂಬ ಚಿಂತನೆಯಾಗಲಿ ಅಥವಾ ಸರ್ಕಾರ ಏನು ಭರವಸೆಗಳನ್ನು ಕೊಡಬೇಕೆಂಬ ಬಗ್ಗೆ ಆಳವಾಗಿ ಅಭ್ಯಾಸ ಮಾಡಿಲ್ಲ. ಇಂಥ ಲೋಪವನ್ನು ಸರ್ಕಾರ ಮಾಡಿರತಕ್ಕದ್ದು ಬಹುಶಃ ಈ ರಾಜ್ಯದ ವಿಧಾನ ಸಭೆಯ ಚರಿತ್ರೆಯಲ್ಲಿ ಪ್ರಥಮ ಅನ್ನಿಸುತ್ತದೆ. ಇದು ರಾಜ್ಯಪಾಲರಿಗೆ ಮಾಡಿರತಕ್ಕ ಅವಮಾನ ಹೌದು. ಅವರ ಭಾಷಣವನ್ನು ಎಷ್ಟು ಕೇರ್ ಲೆಸ್ (ಅಸಡ್ಡೆ)ಯಾಗಿ ಈ ಸರ್ಕರ ಭಾವಿಸಿದೆ ಎಂದು ಇದು ತೋರಿಸಿಕೊಡುತ್ತದೆ. ಈ ಸದನ ಪ್ರಾರಂಭವಾದ ತಕ್ಷಣ ಆ ಕಡೆ ಮತ್ತು ಈ ಕಡೆ ಸದಸ್ಯರು ಅತ್ಯಂತ ಗಹನವಾದ ವಿಚಾರವನ್ನು ಚರ್ಚಿಸಿದ್ದು ಎಂದರೆ ಕುಡಿಯುವ ನೀರಿನ ಬಗ್ಗೆ. ಆ ಬಗ್ಗೆ ಇವತ್ತು ಗ್ರಾಮೀಣ ಅಭಿವೃದ್ಧಿ ಸಚಿವರು ಹೇಳಿಕೆ ಕೂಡ ಕೊಟ್ಟಿದ್ದಾರೆ. ಇದನ್ನು ನೋಡಿದರೆ ಪರಿಸ್ಥಿತಿ ಎಷ್ಟು ತೀವ್ರವಾಗಿದೆ ಎಂದು ಅರ್ಥವಾಗುತ್ತದೆ. ಆದರೆ ಅಂಥ ವಿಚಾರವನ್ನು ಕೂಡ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ. ಹಾಗೂ ಆ ಬಗ್ಗೆ ಪ್ರಸ್ತಾಪ ಮಾಡತಕ್ಕ ಗೊಜಿಗೂ ಹೋಗಿಲ್ಲವೆಂಬ ಮಾತನ್ನು ವಿಷಾದದಿಂದ ಹೇಳಬೇಕಾಗಿದೆ. ಇಷ್ಟೇ ಅಲ್ಲದೆ, ಈ ಆಡಳಿತದ ಬಗ್ಗೆ ಯಾವ ರೀತಿ ನಡೆಯುತ್ತಿದೆ ಎಂಬುದರ ಬಗ್ಗೆ ನಾವು ಹೇಳಬೇಕಾಗಿರತಕ್ಕದ್ದು ಸೂಕ್ತ ಅನ್ನಿಸುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪಂಚಸೂತ್ರಗಳ ಬಗ್ಗೆ ಹೇಳಿದ್ದಾರೆ.

ಅಂದರೆ "Simplification of Procedure,

Dclegation of Authority,

Public Accountability,

Monitoring from Village to State Level,

Redressal of Public Grievances." ಎನ್ನುವ ಬಗ್ಗೆ ಹೇಳಿದ್ದಾರೆ.

ಮಾನ್ಯ ಅಧ್ಯಕ್ಷಿಣಿಯವರೆ, ನಮ್ಮೆಲ್ಲರನ್ನೂ ಕಾಡುತ್ತಾ ಇರತಕ್ಕದ್ದು, ನಮ್ಮ ಸಮಾಜವನ್ನು ಕಾಡುತ್ತಾ ಇರತಕ್ಕದ್ದು ಎಂದರೆ ಆಡಳಿತದಲ್ಲಿರತಕ್ಕ ಭ್ರಷ್ಟಾಚಾರ. ಈ ಆಡಳಿತದಲ್ಲಿರತಕ್ಕ ಭ್ರಷ್ಟಾಚಾರದ ಬಗ್ಗೆ ಈ ರಾಜ್ಯಪಾಲರ ಭಾಷಣದಲ್ಲಿ ಒಂದು ಕಡೆ ಒಂದು ಪದವೂ ಕೂಡ ಪ್ರಸ್ತಾಪ ಆಗಿಲ್ಲ. ಭ್ರಷ್ಟಾಚಾರದ ಬಗ್ಗೆ ಒಂದು ಪದವೂ ಕೂಡ ಇಲ್ಲ.

ಕೊನೇ ಪಕ್ಷ ಔಪಚಾರಿಕವಾಗಿ ಆದರೂ ಕೂಡ ಕೆಲವು ಮಾತುಗಳನ್ನು ಅವರ ಬಾಯಿಯಿಂದ ಬರಿಸಬೇಕಾಗಿತ್ತು. ಔಪಚಾರಿಕವಾಗಿಯೂ ಆದರೂ ಇವತ್ತಿನ ದಿವಸ ಮಾಡತಕ್ಕ, ಹೇಳತಕ್ಕ ಕೆಲಸವನ್ನು ಈ ಸರ್ಕಾರ ಮಾಡದೇ ಇರತಕ್ಕದ್ದು ಬಹಳ ದುರದೃಷ್ಟಕರ. ಕಾರಣ ಏನೆಂದರೆ, ಈ ಸರ್ಕಾರಕ್ಕೆ ಆಡಳಿತದಲ್ಲಿರತಕ್ಕ ಭ್ರಷ್ಟಾಚಾರವನ್ನು ತೊಡೆದುಹಾಕುವುದಕ್ಕೆ ಅಥವಾ ಆ ರೀತಿಯ ದಿಕ್ಕಿನಲ್ಲಿ ಪ್ರಯತ್ನ ಮಾಡುವುದಕ್ಕೆ ಇಷ್ಟ ಇಲ್ಲ. ಇದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಇದನ್ನು ಇನ್ನೂ ಹೆಚ್ಚಿಗೆ ಮಾಡಿಕೊಂಡು ಹೋಗುವುದಕ್ಕೆ, ಇದನ್ನು ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಗುವುದಕ್ಕೆ ಇವರೂ ಶಾಮೀಲಾಗುತ್ತಿದ್ದಾರೆ ಎಂದು ನಾನು ಗತ್ಯಂತರ ಇಲ್ಲದೆ ಮೊದಲನೇ ಪುಟದಿಂದ ಕೊನೇ ಪುಟದವರೆಗೆ ಓದಿದಾಗ ಹೇಳಲೇಬೇಕಾದ ಪರಿಸ್ಥಿತಿಗೆ ನನ್ನನ್ನು ತಂದೊಡ್ಡಿದ್ದಾರೆ. ಇದಕ್ಕೆ ಕಾರಣ ಏನೆಂದರೆ ಮೊನ್ನೆ ದಿವಸ ಈ ಸದನದಲ್ಲಿ ಅಫಿಷೀಯಲ್ ಗ್ಯಾಲರಿಯಲ್ಲಿ ಅಧಿಕಾರಿಗಳು ಯಾರೂ ಇಲ್ಲ, ಅದಕ್ಕೋಸ್ಕರವಾಗಿ ಈ ಸದನದ ಕಾರ್ಯಕಲಾಪ ಮುಂದಕ್ಕೆ ಹೋಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ನಾನು ಆ ವಿಚಾರವನ್ನು ಹೇಳುವುದಕ್ಕೆ ಹೋಗುವುದಿಲ್ಲ, ಆಡಳಿತ ಪಕ್ಷದ ಜವಾಬ್ದಾರಿಯುತವಾಗಿ ರಾಜ್ಯದ ಆಡಳಿತವನ್ನು ವಹಿಸಿಕೊಂಡಿರತಕ್ಕ ಲೆಜಿಸ್ಲೇಚರ್ ಪಾರ್ಟಿ ಸೆಕ್ರೆಟರಿಯಾಗಿರತಕ್ಕ ಮಾನ್ಯ ಅನಂತಕೃಷ್ಣ ಅವರು ಹೇಳಿದ್ದಾರೆ. ಅವರು ಹೇಳಿರತಕ್ಕದ್ದು ಏನು? ಈ ರಾಜ್ಯದ ಮುಖ್ಯ ಕಾರ್ಯದರ್ಶಿ ಕಚೇರಿಗೆ ಟೆಲಿಫೋನ್ ಮಾಡಿದರೆ ಅವರ ಪಿ.ಎ. ಫೋನ್ ರಿಸೀವ್ ಮಾಡುತ್ತಾರೆ. ರಿಸೀವ್ ಮಾಡಿದರೆ ಮುಖ್ಯ ಕಾರ್ಯದರ್ಶಿಗಳು ಮೀಟಿಂಗ್‌ನಲ್ಲಿದ್ದಾರೆ, ಈಗ ಬರತಕ್ಕ ಪರಿಸ್ಥಿತಿಯಲ್ಲಿ ಇಲ್ಲ ಎಂದು, ಅದನ್ನು ನನಗೆ ಹೇಳಲಿಲ್ಲ, ಲೆಜಿಸ್ಲೇಚರ್ ಪಾರ್ಟಿ ಸೆಕ್ರೆಟರಿಯವರಿಗೆ ಆ ಉತ್ತರ ಕೊಟ್ಟಿದ್ದಾರೆ ಅವರು. ವಿರೋಧ ಪಕ್ಷದಲ್ಲಿ ಈ ಸಾಲಿನಲ್ಲಿರುವವರಿಗೆ ಹೇಳಿದ ಮಾತಲ್ಲ ಅದು. ಲೆಜಿಸ್ಲೇಚರ್ ಪಾರ್ಟಿ ಸೆಕ್ರೆಟರಿ ಶ್ರೀಮಾನ್ ಅನಂತಕೃಷ್ಣ ಅವರಿಗೆ ಹೇಳಿರತಕ್ಕ ಮಾತು ಇದು. ಈ ಸಂದರ್ಭದಲ್ಲಿ ಇದನ್ನು ಪ್ರಶ್ನೆ ಮಾಡುತ್ತೇನೆ ಒಬ್ಬ ಮುಖ್ಯ ಕಾರ್ಯದರ್ಶಿಯಾಗಿರತಕ್ಕವರು ಈ ಸದನಕ್ಕಿಂತ ದೊಡ್ಡವರೇ? ಅಥವಾ ಸರ್ಕಾರಕ್ಕಿಂತ ದೊಡ್ಡವರೇ? ಇದು ಇವತ್ತಿನ ದಿವಸ ಇತ್ಯರ್ಥ ಆಗಬೇಕು. ಆದರೆ ಸರ್ಕಾರದ ದೃಷ್ಟಿಯಲ್ಲಿ ಮುಖ್ಯ ಕಾರ್ಯದರ್ಶಿ ಆಗಿರತಕ್ಕವರು ಸರ್ಕಾರಕ್ಕಿಂತ ದೊಡ್ಡವರು. ಅವರು ಸರ್ಕಾರಕ್ಕಿಂತ ಮೇಲಿರತಕ್ಕವರು. ಅವರು ಅದನ್ನು ಒಪ್ಪಬಹುದು. ಈ ಕಡೆ ಕುಳಿತಿರತಕ್ಕ ನಾವಂತೂ ಅದನ್ನು ಒಪ್ಪುವುದಕ್ಕೆ ತಯಾರಿಲ್ಲ. ಈ ರೀತಿಯಾಗಿ ಮುಖ್ಯ ಕಾರ್ಯದರ್ಶಿ ಏನು ನಡೆದುಕೊಂಡಿದ್ದಾರೆ ಅವರ ವರ್ತನೆಯನ್ನು ಇಲ್ಲಿ ಖಂಡನೆ ಮಾಡದೆ ಗತ್ಯಂತರವಿಲ್ಲ ಎಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಬೈರೇಗೌಡರು ನನ್ನ ಹೆಸರನ್ನು ಹೇಳಿ ಪ್ರಸ್ತಾಪ ಮಾಡುತ್ತಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ನನಗೇನೂ ಪತ್ರ ಕೊಟ್ಟಿದ್ದಾರೆ ಎಂದು.

ಶ್ರೀ ಸಿ. ಬೈರೇಗೌಡ : ಪತ್ರ ಅಲ್ಲ, ಪತ್ರಿಕೆಯಲ್ಲಿ ತಾವು ಹೇಳಿರತಕ್ಕ ಹೇಳಿಕೆ ಬಂದಿದೆ. ಈ ಸದನದ ಕಾರ್ಯಕಲಾಪ ನಡೆಯಬೇಕಾದರೆ ಮುಖ್ಯ ಕಾರ್ಯದರ್ಶಿಯವರಿರಬೇಕು ಎಂಬ ಸಂದರ್ಭದಲ್ಲಿ ಅವರ ಕಛೇರಿಗೆ ತಾವು ಟೆಲಿಫೋನ್ ಮಾಡಿದಾಗ ಅವರ ಪಿ.ಎ. ಟೆಲಿಫೋನ್ ರಿಸೀವ್ ಮಾಡಿ ಮುಖ್ಯ ಕಾರ್ಯದರ್ಶಿ ಮೀಟಿಂಗ್‌ನಲ್ಲಿದ್ದಾರೆ ಎಂದು ತಮಗೆ ತಿಳಿಸಿದರು ಎಂಬ ಮಾತನ್ನು ತಾವು ಹೇಳಿದ್ದೀರಿ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಪತ್ರ ಬರೆದಿದ್ದಾರೆ ಎಂದು ಅಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ನನಗೆ ಯಾವುದೂ ಪತ್ರ ಬಂದಿಲ್ಲ.

ಶ್ರೀ ಸಿ. ಬೈರೇಗೌಡ : ಪತ್ರದ ಬಗ್ಗೆ ಹೇಳಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಅಷ್ಟಾದರೆ ಸರಿ.

ಶ್ರೀ ಆರ್. ದಯಾನಂದ ರಾವ್ : ಬೈರೇಗೌಡರು ಹೇಳುತ್ತಾ ಇರುವುದು ಕಥೆ. ಅದು ನಡೆದಿಲ್ಲ. ಏನೂ ಇಲ್ಲ. ನೀವು ಕಥೆ ಹೇಳುತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ : ನಿಮಗೆ ಅದೂ ಬರುವುದಿಲ್ಲವಲ್ಲ. ಅದಕ್ಕೆ ನಿಮ್ಮನ್ನು ಕೊನೆಯಲ್ಲಿ ಕೂರಿಸಿದ್ದಾರೆ ಬಿಡಿರಿ, ನಿಮಗೆ ಇದೆಲ್ಲಾ ಅರ್ಥವಾಗುವುದಿಲ್ಲ. ನಿಮಗೆ ಅರ್ಥ ಆಗದೇ ಇರುವುದನ್ನು ನೀವು ಮಾತನಾಡುವುದಕ್ಕೆ ಹೋಗಬಾರದು.

ಶ್ರೀ ಎ.ಕೆ. ಅನಂತಕೃಷ್ಣ : ಯೋಗ್ಯತೆ ನೋಡಿ ಕೊನೆಯಲ್ಲಿ ಜಾಗ ಕೊಟ್ಟಿದ್ದಾರೆಂದು ಹೇಳುವುದ ಸರಿಯಲ್ಲ. ಯಾರು ಏತಕ್ಕೆ ಯಾರನ್ನು ಎಲ್ಲಿ ಕೂರಿಸಿದ್ದಾರೆಂಬ ಬಗ್ಗೆ ನಿಮಗೆ ಚೆನ್ನಾಗಿ ಅನುಭವವಿದೆ. ದಯವಿಟ್ಟು ತಾವು ಆ ರೀತಿ ಹೇಳಬಾರದು.

ಶ್ರೀ ಸಿ. ಬೈರೇಗೌಡ : ಆಯಿತು, ಹಾಗೆ ನಾನು ಹೇಳಿದ್ದು ಸರಿಯಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದು ಸರಿಯಲ್ಲ, ಬಿಡಿ. ಈಗ ವಿಷಯಕ್ಕೆ ಬರುತ್ತೇನೆ. ಆದುದರಿಂದ ಮುಖ್ಯ ಕಾರ್ಯದರ್ಶಿಯವರ ವರ್ತನೆಯನ್ನು ಮತ್ತೊಮ್ಮೆ ಖಂಡನೆ ಮಾಡತಕ್ಕದ್ದು ನನ್ನ ಕರ್ತವ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕಳೆದ ಬಡ್ಜೆಟ್ ಮೇಲೆ ಇಲ್ಲಿ ನಡೆದಿರತಕ್ಕ ಚರ್ಚೆ, ಮಾನ್ಯ ಅರ್ಥ ಮಂತ್ರಿಗಳಾಗಿರತಕ್ಕವರು ಕೊಟ್ಟಿರತಕ್ಕ ಕೆಲವು ಆಶ್ವಾಸನೆಗಳು ಎಷ್ಟರಮಟ್ಟಿಗೆ ಜಾರಿಯಾಗಿವೆ ಎನ್ನುವ ಬಗ್ಗೆ ಸ್ವಲ್ಪ ಹೊತ್ತಿಗೆ ಮೊದಲು ಚರ್ಚೆಯಾಯಿತು. ಕುಡಿಯುವ ನೀರಿನ ಬಗ್ಗೆ 25 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಕೊಡುತ್ತೇವೆನ್ನುವ ಮಾತನ್ನು ಇಲ್ಲಿ ಹೇಳಿದ್ದಾರೆ. ಆ ಆಶ್ವಾಸನೆ ಈ ಸದನದ ಸೊತ್ತಾಗಿದೆ. ಈಗ ತಾನೇ ಆ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ. ನಾನು ಅದರ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ಆ 25 ಕೋಟಿಯಲ್ಲಿ ಕೊನೇ ಪಕ್ಷ 25 ಪೈಸೆ, 25 ಕಾಸನ್ನಾದರೂ ಈ ವರ್ಷ ನಾವು ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದರೆ, ಹೋಗಲಿ ಏನೋ ಪಾಪ ಎಂದು ಸಂತೋಷಪಡಬಹುದಾಗಿತ್ತು. ಆದರೆ 25 ಪೈಸೆ ಕೊಡುವ ವ್ಯವಸ್ಥೆ ಮಾಡಿಲ್ಲ. ಪ್ರತಿ ಕ್ಷೇತ್ರದಲ್ಲೂ ಕೂಡ 12 ಲಕ್ಷ ರೂ.ಗಳ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಇಲ್ಲಿಯವರೆಗೂ ಕೂಡಾ ಆ ಬಾಬಿನಲ್ಲಿ ಎಷ್ಟು ಹಣ ಖರ್ಚಾಗಿದೆ ಎಂದು ಸರ್ಕಾರ ತಿಳಿಸಿಲ್ಲ. ಅದನ್ನು ತಿಳಿಸಬೇಕು. ಕಾರಣ ಏನೆಂದರೆ, ಮಾನ್ಯ ಸದಸ್ಯರು ಕೆಲವರು ತಿಳಿದುಕೊಂಡಿದ್ದಾರೇನೆಂದರೆ ಕೆಲಸ ಕಾರ್ಯಗಳು ಕೆಲವು ಕಡೆ ನಡೆಯುತ್ತಿವೆ ಎಂದು; ಇಲ್ಲವೆಂದು ಹೇಳುವುದಿಲ್ಲ. ಆದರೆ ಈ ಬಾಬಿನಲ್ಲಿ ಇಲ್ಲಿಯವರೆಗೂ ಸಂಬಂಧಪಟ್ಟ ಇಲಾಖೆಗಳಿಗೆ ಒಂದು ನಯಾಪೈಸೆ ಹಣ ಬಿಡುಗಡೆ ಮಾಡಿಲ್ಲ. ಅನೇಕ ಕಡೆ ಕೆಲಸ ಮುಗಿದಿದ್ದರೂ ಕೂಡ ಬಿಲ್ಲು ಕೊಡುವ ಕೆಲಸ ಆಗಿಲ್ಲ. ಈ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ, ಈ ಬಾಬತ್ತಿನಲ್ಲಿ ಹಣ ನಮಗೆ ಬಿಡುಗಡೆ ಆಗಿಲ್ಲ, ಆದುದರಿಂದ ಈ ಕೆಲಸಕ್ಕೆ ಬಿಲ್ಲು ಪಾವತಿ ಮಾಡುವ ಸ್ಥಿತಿಯಲ್ಲಿ ನಾವು ಇಲ್ಲ ಎಂದು ಸ್ಥಳದಲ್ಲಿರುವ ಅಧಿಕಾರಿಗಳು ತಿಳಿಸುತ್ತಾರೆ. ನಾನು ಇವತ್ತು ಸರ್ಕಾರದಲ್ಲಿ ಪ್ರಶ್ನೆ ಮಾಡುವುದು ಏನೆಂದರೆ, ಈ ಸದನಕ್ಕೆ ಕೊಟ್ಟಿರತಕ್ಕ ವಚನವನ್ನು ಜಾರಿಗೆ ತರದೆ ವಚನಭ್ರಷ್ಟ ಆಗಿರುವ ಪರಿಸ್ಥಿತಿ ಬಂದಿದೆ. ಗ್ರಾಮಾಂತರ ಪ್ರದೇಶದಲ್ಲಿ ಅತಿ ಮುಖ್ಯವಾದ ರಸ್ತೆ ಕೆರೆ ರಿಪೇರಿ ಬಗ್ಗೆ ಏನೂ ಮಾಡಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಯೋಗ್ಯತೆ ನಮಗಿಲ್ಲ. ಹಳ್ಳಿಗೆ ಹೋಗುವುದಕ್ಕೆ ರಸ್ತೆ, ಎತ್ತಿನಗಾಡಿ ಹೋಗುವುದಕ್ಕೆ ರಸ್ತೆ, ಮತ್ತೊಂದು ಅಭಿವೃದ್ಧಿ ಕೆಲಸ ಮಾಡುವುದಕ್ಕೆ ನಮ್ಮಲ್ಲಿ ಹಣ ಇಲ್ಲ. ಅಷ್ಟೇ ಅಲ್ಲ, ನಮ್ಮ ಅರ್ಥ ಮಂತ್ರಿಗಳು ಪದೇ ಪದೇ ಹೇಳುತ್ತಾ ಬಂದಿದ್ದಾರೆ. ಏನೆಂದರೆ ಈ ವರ್ಷ 90-91ನೇ ಸಾಲಿನಲ್ಲಿ ಎಕ್ಸೈಸ್ ಬಾಬಿನಲ್ಲಿ ಸಾರಾಯಿ ಮಾರಾಟ ಒಂದರಿಂದಲೇ 314 ಕೋಟಿ ರೂಪಾಯಿ ಹೋದ ವರ್ಷಕ್ಕಿಂತಾ ಈ ವರ್ಷ ಹೆಚ್ಚಿಗೆ ಆದಾಯ ಬರುತ್ತದೆಂದು ಒಂದು ಸಲ ಅಲ್ಲ

ಹಲವು ಬಾರಿ ಈ ಸದನದಲ್ಲಿ ತಿಳಿಸಿದ್ದಾರೆ. ಆ ವಿಚಾರವನ್ನು ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ಕಾರಣ ಏನೆಂದರೆ, ಇದು ಹಣಕಾಸಿನ ವಿಷಯವಾಗಿರುವುದರಿಂದ ಆಯವ್ಯಯದ ವಿಚಾರ ಪ್ರಸ್ತಾಪಕ್ಕೆ ಬಂದಾಗ ಈ ಬಗ್ಗೆ ನಾನು ಹೆಚ್ಚಿನ ವಿವರಕ್ಕೆ ಹೋಗುವುದಕ್ಕೆ ಇಷ್ಟಪಡುತ್ತೇನೆ. ಈಗ ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ 314 ಕೋಟಿ ರೂಪಾಯಿಗಳಲ್ಲಿ ಕೇವಲ 100 ರಿಂದ 150 ಕೋಟಿ ರೂಪಾಯಿ ಕೂಡ ಸರ್ಕಾರದ ಖಜಾನೆಗೆ ಬಂದಿರುವುದಿಲ್ಲ. ಇದಕ್ಕೆ ಕಾರಣ ಏನೆಂದರೆ ಈ ಸರ್ಕಾರ ಈ ರಾಜ್ಯದಲ್ಲಿರುವ ಎಕ್ಸೈಸ್ ದೊರೆಗಳ ಒಂದು ಪ್ರಾಡಕ್ಟ್ ಆಗಿದೆ. ಆ ದೊರೆಗಳ ಔದಾರ್ಯದ ಮೇಲೆ ಬಂದಿರತಕ್ಕ ಸರ್ಕಾರ ಇದಾಗಿದೆ.

12.40 ಪಿ.ಎಂ.

ಆದ್ದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಲೀ ಅಥವಾ ಅವರಿಂದ ಬರಬೇಕಾಗಿರತಕ್ಕಂತಹ ಹಣವನ್ನು ವಸೂಲು ಮಾಡತಕ್ಕಂತಹ ಕೆಲಸವಾಗಲೀ ಈ ಸರಕಾರ ಇವತ್ತಿನ ದಿವಸ ಮಾಡಿಲ್ಲ, ಅದರ ಬಗ್ಗೆ ಸರಕಾರ ಹೇಳಿಕೆ ಕೊಡಬೇಕು. 314 ಕೋಟಿ ರೂಪಾಯಿ ಹೆಚ್ಚುವರಿ ಹಣ ಬರುತ್ತದೆಂದು ಹಿಂದಿನ ಅರ್ಥ ಮಂತ್ರಿಗಳು ತಿಳಿಸಿದ್ದಾರೆ. ಅದರಲ್ಲಿ ಎಷ್ಟು ಹಣ ಬಂದಿದೆ ಎಂದು ಹೇಳಬೇಕು. ಈಗ ವಿವರಗಳನ್ನು ನಾನು ಕೊಡುವುದಕ್ಕೆ ತಯಾರಿಲ್ಲ, ನನ್ನ ಹತ್ತಿರ ವಿವರಗಳಿವೆ. ಈಗ ಯಾವ್ಯಾವ ತಾಲ್ಲೂಕಿನಲ್ಲಿ ಈ ಹಣ ಬಾರದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ ಮತ್ತು ಅದಕ್ಕೆ ಸರಕಾರ ಯಾವ ರೀತಿಯಾಗಿ ಶಾಮೀಲಾಗಿದೆ ಎನ್ನುವುದರ ಬಗ್ಗೆ ಇವತ್ತಿನ ದಿವಸ ವಿವರವನ್ನು ಕೊಡುವುದಕ್ಕೆ ನಾನು ಹೋಗುವುದಿಲ್ಲ. ಹೆಚ್ಚಿಗೆ ನಾನು ಅದರ ಬಗ್ಗೆ ಮಾತನಾಡುವುದಿಲ್ಲ, ಬಡ್ಜೆಟ್ಟಿನ ಮೇಲೆ ಮಾತನಾಡತಕ್ಕಂತ ಸಂದರ್ಭದಲ್ಲಿ ವಿವರಗಳನ್ನು ಕೊಡುವವನಿದ್ದೇನೆ. ಎಷ್ಟು ಹಣ ಈಗ ಬಂದಿದೆ ಎಷ್ಟು ಹಣ ಬಂದಿಲ್ಲ ಅದು ಏಕೆ ಬರಲಿಲ್ಲ, ಇದರ ಬಗ್ಗೆ ಸರಕಾರ ತೆಗೆದುಕೊಂಡಿರತಕ್ಕಂತಹ ಕ್ರಮ ಏನು ಎನ್ನುವುದರ ಬಗ್ಗೆ ತಾವು ಉತ್ತರವನ್ನು ಕೊಡಬೇಕು. ಈ ವಿಚಾರದಲ್ಲಿ ಸರಕಾರ ತನ್ನ ಘನತೆ ಗೌರವವನ್ನು ಕಾಪಾಡಿಕೊಳ್ಳಬೇಕೆಂಬ ಆಸೆಯಿದ್ದರೆ, ಆ ರೀತಿಯಾದಂತಹ ರೀತಿ ಕೆಲಸ ಮಾಡಬೇಕೆಂಬ ಆಸೆಯಿದ್ದರೆ ಆ ವಿವರಗಳನ್ನು ಕೊಡಬೇಕಾಗಿರುವುದು ಅವರ ಕರ್ತವ್ಯ. ಇಲ್ಲದೇ ಹೋದರೆ ಮಾನ ಮರ್ಯಾದೆ ಇಲ್ಲದೇ ಇರತಕ್ಕಂತಹ ಸರಕಾರ ಎಕ್ಸೈಸ್ ದೊರೆಗಳ ಸರಕಾರ ಎನ್ನತಕ್ಕಂತಹ ಮಾತನ್ನು ಒಂದು ಸಾರಿ ಅಲ್ಲ, ನನ್ನ ಉಸಿರಿರುವವರೆಗೂ ಕೂಗಬೇಕಾಗುತ್ತದೆ. ಇವತ್ತಿನ ದಿವಸ ಕೆಲವು ಅಧಿಕಾರಿಗಳು ನಮ್ಮ ರಾಜ್ಯದಲ್ಲಿದ್ದಾರೆ. ಯಾರು ಎಷ್ಟೆಷ್ಟು ಭ್ರಷ್ಟರೋ, ಎಷ್ಟೆಷ್ಟು ಹೆಚ್ಚಿಗೆ ಭ್ರಷ್ಟತನವನ್ನು ಮಾಡುತ್ತಾರೋ ಅವರಿಗೆ ಅಷ್ಟೂ ಉನ್ನತ ಪದವಿಯನ್ನು ಕೊಡುವುದು ವಾಡಿಕೆ ಇದೆ. ಮತ್ತಷ್ಟು ಅವರು ಭ್ರಷ್ಟರಾಗುವುದಕ್ಕೆ ಎಲ್ಲೆಲ್ಲಿ ಅವಕಾಶವಿದೆಯೋ ಅಲ್ಲಿಗೆ ಅವರನ್ನು ವರ್ಗ ಮಾಡತಕ್ಕಂಥಾದ್ದು ವಾಡಿಕೆಯಾಗಿದೆ. ಲೋಕಾಯುಕ್ತದ ಮೂಲಕ ಇಡೀ ಭಾರತದೇಶದಲ್ಲಿ ಇವತ್ತಿಗೆ ಯಾರಾದರೂ ಕೂಡ ಅತಿ ಹೆಚ್ಚಿನ ಭ್ರಷ್ಟಾಚಾರದ ಬಲೆಗೆ ಸಿಕ್ಕಿ ಹೋಗಿರತಕ್ಕಂತಹ ಹಣದ ರೂಪದಲ್ಲಿ ಭ್ರಷ್ಟಾಚಾರಕ್ಕೆ ಸಿಕ್ಕಿಕೊಂಡಿರತಕ್ಕಂತಹ ಒಂದು ಘಟನೆ ಎಲ್ಲಿ ನಡೆದಿದೆ ಎಂದರೆ ಕರ್ನಾಟಕದಲ್ಲಿ ನಡೆದಿದೆ ಎಂದು ಹೇಳಬಹುದು. ನಾನು ಕಳೆದ ಸದನದಲ್ಲಿ ಒಂದು ಮಾತನ್ನು ಹೇಳಿದ್ದೆ. ಹಚ್ಚಗೆ ಇರುವಲ್ಲಿ ಮೇಯುತ್ತಾರೆ. ಬೆಚ್ಚಗೆ ಇರುವ ಕಡೆ ಮಲಗುತ್ತಾರೆ ಎಂದು. ಈ ನೀತಿಯನ್ನು ಸರಕಾರ ಇವತ್ತಿನ ದಿವಸ ಅನುಸರಿಸುತ್ತಾ ಬಂದಿದೆ. ಎಲ್ಲೆಲ್ಲಿ ಅತ್ಯಂತ ಫಲವತ್ತಾದ ಹುಲ್ಲುಗಾವಲುಗಳು ಇವೆ ಹಸುರಾದಂತಹ ಹುಲ್ಲುಗಾವಲುಗಳು ಇವೆ, ಏನೂ ಶ್ರಮವಿಲ್ಲದೆ ಮೇಯತಕ್ಕಂತಹ ಅವಕಾಶಗಳು ಎಲ್ಲೆಲ್ಲಿ ಇವೆ. ಅಂತಹ ಕಡೆ ಇಂತಹ ಅಧಿಕಾರಿಗಳನ್ನು ವರ್ಗ ಮಾಡತಕ್ಕಂಥಾದ್ದಕ್ಕೆ ಬಹಳ ಚಾಕಚಕ್ಯತೆಯಿಂದ ಬಹಳ ತರಾತುರಿಯಿಂದ ಬಹಳ ಶೀಘ್ರವಾಗಿ ಆ ಕೆಲಸ

ಮಾತ್ರ ಈ ಸರಕಾರದಲ್ಲಿ ಆಗಿದೆ. ಇದಕ್ಕೆ ಸಾಕಷ್ಟು ಉದಾಹರಣೆಗಳೂ ಕೂಡ ಇವೆ. ಅದನ್ನು ನಾನು ಮುಂದೆ ಕೊಡಲಿದ್ದೇನೆ. ಇನ್ನು ಮುಖ್ಯ ಕಾರ್ಯದರ್ಶಿಗಳ ಬಗ್ಗೆ ಮಾತನಾಡದೇ ಗತ್ಯಂತರವಿಲ್ಲ. ಇವರು ನಡೆಸಿರತಕ್ಕಂತಹ ವ್ಯವಹಾರಗಳು ಆಗಿರತಕ್ಕಂತಹ ನಷ್ಟ ಮಾಡಿರತಕ್ಕಂತಹ ಕೀಟಲೆ, ಇದರ ಬಗ್ಗೆ ಹೇಳದಿದ್ದರೆ ನಾನು ನನ್ನ ಕರ್ತವ್ಯದಿಂದ ವಿಫಲನಾಗುತ್ತೇನೆ. ಈಗ ಇರತಕ್ಕಂತಹ ಹಾಲಿ ಮುಖ್ಯ ಕಾರ್ಯದರ್ಶಿಗಳಾದ ಎನ್.ಕೆ. ಪ್ರಭಾಕರರಾವ್ ಅವರು ...

ಉಪಾಧ್ಯಕ್ಷರು : ಅವರ ಹೆಸರು ಹೇಳುವುದು ಏಕೆ?

ಶ್ರೀ ಸಿ. ಬೈರೇಗೌಡ : ಹೆಸರು ಹೇಳಿದರೆ ತಪ್ಪೇನೂ ಇಲ್ಲ, ಅವರು ಇನ್ನೂ ಅಧಿಕಾರದಲ್ಲಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಅವರ ಹೆಸರನ್ನು ಹೇಳುವುದು ಸರಿಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೆಸರನ್ನು ಹೇಳಬಾರದೆಂದು ಎಲ್ಲಿ ನಿಯಮ ಇದೆ. ನಾನು ನಿಮ್ಮಷ್ಟು ಸಂಸದೀಯ ವ್ಯವಹಾರದಲ್ಲಿ ಅನುಭವವನ್ನು ಪಡೆದಿಲ್ಲ. ಇತ್ತೀಚೆಗೆ ಅಕಸ್ಮಿಕವಾಗಿ ಅಸೆಂಬ್ಲಿಗೆ ಬಂದಿದ್ದೇನೆ. ನೀವು ಇಲ್ಲಿ ಕೂತಾಗ ಯಾರ ಹೆಸರೂ ಹೇಳಲೇ ಇಲ್ಲವಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಹೆಸರು ಹೇಳದೆ ಇದ್ದರೂ ಕೂಡ ತಮಗೆ ಏನು ಸಾಧನೆಯಾಗಬೇಕೋ ಅದನ್ನು ಮಾಡುವುದಕ್ಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಬಹಳ ವರ್ಷಗಳಿಂದ ಇಲ್ಲಿ ಕೆಲಸ ಮಾಡಿದ್ದೀರಿ. ಈ ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ರಾಜ್ಯಪಾಲರ ಭಾಷಣ ವಂದನಾ ನಿರ್ಣಯದ ಮೇಲೆ ತಾವು ಏನೇನು ಮಾತನಾಡಿದ್ದೀರಿ ಎಂಬುದನ್ನು ಡಿಬೇಟ್ ತೆಗೆಸಿ ನೋಡಿದರೆ ಗೊತ್ತಾಗುತ್ತದೆ. ನಾವು ನಿಮಗಿಂತ ಹಿಂದೆ ಇದ್ದೇವೆ. ನಿಮ್ಮಿಂದ ನಾವು ಕಲಿಯುವುದು ಬಹಳ ಇದೆಯೆಂದು ನನಗನ್ನಿಸುತ್ತದೆ.

ಶ್ರೀ ಸಿ. ಬೈರೇಗೌಡ : ಶ್ರೀಮಾನ್ ಎನ್.ಕೆ. ಪ್ರಭಾಕರ್ ರಾವ್‌ರವರು ಎನ್. ಜಿ.ಇ.ಎಫ್. ಕಾರ್ಖಾನೆಯ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು. ಈ ಎನ್.ಜಿ.ಇ.ಎಫ್. ಕಾರ್ಖಾನೆಗೆ ಅದರದೇ ಆದ ಒಂದು ಇತಿಹಾಸವಿದೆ. ಏತಕ್ಕೆ ಇತಿಹಾಸವಿದೆಯೆಂದು ನಾನು ಹೇಳುತ್ತಿದ್ದೇನೆಂದರೆ, ಅಲ್ಲಿ ಅಧಿಕಾರಿಗಳಾಗಿರತಕ್ಕವರು ಅಲ್ಲಿ ಟೆಕ್ನಾಲಿಜಿಸ್ಟ್ ಆಗಿರತಕ್ಕವರೆಲ್ಲರೂ ಕನ್ನಡಿಗರೆ. ಕನ್ನಡಿಗರ ಒಂದು ಕೌಶಲವನ್ನು ಟೆಕ್ನಿಕಲ್ ಸ್ಕಿಲ್‌ನ್ನು ತೋರಿಸಿ ಕೊಡತಕ್ಕ ಒಂದು ಅವಕಾಶ ಮತ್ತು ಇಡೀ ದೇಶದಲ್ಲಿಯೇ ಎನ್.ಜಿ.ಇ.ಎಫ್. ಕಾರ್ಖಾನೆಗೆ ತನ್ನದೇ ಆದ ಒಂದು ಹೆಗ್ಗಳಿಕೆ ಇತ್ತು. ಪ್ರಭಾಕರ್ ರಾವ್‌ರವರು ಅಲ್ಲಿ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆದ ತಕ್ಷಣ ಅದರ ಒಂದು ಒಳ್ಳೆಯ ಚರಿತ್ರೆ ಏನಿತ್ತು, ಅದರ ಇತಿಹಾಸ ಏನಿತ್ತು ಅದಕ್ಕೆ ಮಸಿ ಬಳಿಯತಕ್ಕ, ಆ ಕಾರ್ಖಾನೆಯ ಇತಿಹಾಸಕ್ಕೆ ಮತ್ತು ಹೆಗ್ಗಳಿಕೆಗೆ ಮಸಿ ಬಳಿಯತಕ್ಕ ಕೆಲಸವನ್ನು ಇವರು ಮಾಡಿದ್ದಾರೆ. ಇದರ ಬಗ್ಗೆ ವಿಚಾರಣೆಯಾಗಿದೆ. ಈ ವಿಚಾರಣೆ ಮಾಡಿರತಕ್ಕವನು ನಾನಲ್ಲ. ಸರ್ಕಾರದ ಬದಲಾವಣೆಯಾದ ತಕ್ಷಣ ಅಲ್ಲಿಂದ ಇವರನ್ನು ತಕ್ಷಣ ರಾಜ್ಯಪಾಲರ ಆಡಳಿತದ ಕಾಲದಲ್ಲಿ ಕಂಪಲ್ಸರಿಯಾಗಿ ಇವರನ್ನು ರಜೆಯ ಮೇಲೆ ಕಳುಹಿಸುವುದಕ್ಕೆ ವಿರ್ಪಾಡಾಯಿತು. It was a forced leave. He was asked to go on forced leave. ಬೇರೆ ಒಬ್ಬ ಅಧಿಕಾರಿ ಬಂದಿದ್ದಾರೆ. ಅವರೂ ಕೂಡ ಐಎಎಸ್ ಅಧಿಕಾರಿ. ಅವರು ವಿಚಾರಣೆ ಮಾಡುವುದಕ್ಕೆ ಪ್ರಯತ್ನ ಪಟ್ಟರು. ವಿಚಾರಣೆಗೆ ಒಬ್ಬರ ನೇಮಕ ಕೂಡ ಆಯಿತು. ವಿಚಾರಣಾ ವರದಿಯನ್ನು ಹಿಂದೆ ಇದ್ದ ಕೈಗಾರಿಕಾ ಮಂತ್ರಿಗಳನ್ನು ಕೇಳಿದೆ. ಏನು ವರದಿ ಇದೆ, ಅದರ ಒಂದು ಪ್ರತಿಯನ್ನು ಕೊಡಿಯೆಂದು ಕೇಳಿದೆ. ಏಕೆಂದರೆ ಸಾರ್ವಜನಿಕರ ಗಮನಕ್ಕೆ

ಆ ವರದಿಯಲ್ಲಿ ಏನಿದೆ ಎಂಬುದು ತಿಳಿಯಬೇಕಾದ ಅವಶ್ಯಕತೆಯಿದೆ. ಕಾರಣ ಏನೆಂದರೆ ಇದು ಸಾರ್ವಜನಿಕ ಉದ್ದಿಮೆ. ಈ ರಾಜ್ಯದ ಪ್ರತಿಯೊಬ್ಬರಿಗೂ ಆ ಉದ್ದಿಮೆಯನ್ನು ಸರಿಯಾಗಿ ನಡೆಸಬೇಕು. ಅದರ ಬಂಡವಾಳದಲ್ಲಿ ಕೂಡ ಪ್ರತಿಯೊಬ್ಬರಿಗೂ ಪಾಲು ಇದೆ. ಪಾಲುಗಾರರಾಗಿರತಕ್ಕವರು ರಾಜ್ಯದ ಜನತೆ ಅಲ್ಲಿ ಯಾವ ರೀತಿಯಾಗುತ್ತಿದೆ ಏನು ಆಡಳಿತ ನಡೆಸುತ್ತಾರೆಂಬುದನ್ನು ಈ ರಾಜ್ಯದ ಜನರಿಗೆ ತಿಳಿಯಬೇಕಾದ ಅವಶ್ಯಕತೆಯಿದೆ. ಆದರೆ ಅಂದಿನ ಕೈಗಾರಿಕಾ ಮಂತ್ರಿಗಳು ಆ ಕೆಲಸ ಮಾಡುವುದಕ್ಕೆ ಹೋಗಲಿಲ್ಲ. ಅದಕ್ಕೆ ಬದಲಾಗಿ ನನ್ನ ಮೇಲೆಯೇ ಹೇಳಿದರು. ಅವರು ಏನೇನೋ ಹೇಳಿಕೆಗಳನ್ನು ಕೊಡುತ್ತಿದ್ದಾರೆಂಬ ಮಾತನ್ನು ಹೇಳಿದರು. ಅಧಿಕಾರದಲ್ಲಿರತಕ್ಕವರು ಅಧಿಕಾರದ ಸೂತ್ರವನ್ನು ಹಿಡಿದಿರತಕ್ಕವರು ಅಲ್ಲಿ ಏನು ಲೋಪಗಳು ಬರುತ್ತವೆ ಅಲ್ಲಿ ಏನು ಅನ್ಯಾಯ ನಡೆಯುತ್ತದೆ, ಎಲ್ಲಾ ಏನು ಲೂಟಿಯಾಗುತ್ತಿದೆ. ಅದನ್ನು ತಡೆಗಟ್ಟತಕ್ಕ ಕೆಲಸ ಮಾಡಲಿಕ್ಕೆ ತಮ್ಮ ಅಧಿಕಾರವನ್ನು ಚಲಾಯಿಸುವಲ್ಲಿ ಸಂಪೂರ್ಣವಾಗಿ ವಿಫಲವಾದರು. ಅವರಿಗೆ ರಕ್ಷಣೆ ಕೊಡತಕ್ಕ ಕೆಲಸ ಯಥೇಚ್ಛವಾಗಿ ನಡೆಯಿತು. ಆದರೆ ನಾನು ಆ ಕೆಲಸವನ್ನು ಸಾರ್ವಜನಿಕರ ಗಮನಕ್ಕೆ ತರಬೇಕು ಎನ್ನುವ ಕಾರಣದಿಂದ ಜಯರಾಮ್‌ರವರ ನೇತೃತ್ವದಲ್ಲಿ ಏನು ಸಮಿತಿ ನೇಮಕವಾಗಿತ್ತು, ಅದರ ವರದಿಯನ್ನು ಸಾರ್ವಜನಿಕರ ಗಮನಕ್ಕೆ ತರುವ ಕೆಲಸವನ್ನು ಮಾಡಿದ್ದೇನೆ. ಆ ವರದಿಯನ್ನು ಮೊದಲಿನಿಂದ ಕೊನೆಯವರೆಗೆ ಓದಿದರೆ ಅರ್ಥವಾಗುತ್ತದೆ. ಇವರು ಅಂತಹ ಅಧಿಕಾರಿಗಳು ಎಂದು ಇವರಿಗೆ ಕಿಂಚಿತ್ತಾದರೂ, ಇದು ಸಾರ್ವಜನಿಕರ ಹಣ, ಸಾರ್ವಜನಿಕರ ಹಿತವನ್ನು ಕಾಪಾಡುವುದಕ್ಕೆ ನಾನು ಇಲ್ಲಿದ್ದೇನೆ. ನಾನೂ ಕೂಡ ಈ ರಾಜ್ಯದಲ್ಲಿ ಈ ದೇಶದಲ್ಲಿ ಹುಟ್ಟಿದ್ದೇನೆ. ನಾನು ಈ ದೇಶಕ್ಕೋಸ್ಕರ ಕಿಂಚಿತ್ತಾದರೂ ಕೂಡ ಒಳ್ಳೆಯದನ್ನು ಮಾಡತಕ್ಕದ್ದು ನನ್ನ ಕರ್ತವ್ಯ ಎನ್ನತಕ್ಕ ಬೇಸಿಕ್ ಪ್ರಿನ್ಸಿಪಲ್ ಅವರಿಗೆ ಇಲ್ಲವೆನ್ನುವುದನ್ನು ಆ ವರದಿಯನ್ನು ಓದಿದರೆ ಗೊತ್ತಾಗುತ್ತದೆ. ನಾನು ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಎರಡು ವರದಿಗಳಿವೆ. ಒಂದು ಇಂಟರೀಯಮ್ ರಿಪೋರ್ಟ್ ಅದು 33 ಪುಟಗಳಿವೆ. ಇನ್ನೊಂದು ಅಂತಿಮ ವರದಿ, ಅದು 44 ಪುಟಗಳಿವೆ. ಅಂದರೆ ಸುಮಾರು 77 ಪುಟಗಳಷ್ಟು ಇರತಕ್ಕ ವರದಿಯನ್ನು ಓದಿ ನಾನು ಇಲ್ಲಿ ಕಾಲಹರಣ ಮಾಡುವುದಕ್ಕೆ ತಯಾರಾಗಿಲ್ಲ. ವರದಿಯಲ್ಲಿರುವುದನ್ನು ಕೆಲವನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ.

79ರಲ್ಲೆನೇ ಅಲ್ಲಿ ಉತ್ಪತ್ತಿ ಆಗಿರತಕ್ಕಂಥಾದ್ದನ್ನು ಯಾವ ರೀತಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ವಿವರವಾಗಿ ಇಲ್ಲಿ ಹೇಳಿದ್ದಾರೆ. ಇದರಲ್ಲಿ Standing Order No. 430650040 dated 8-4-1979 read thus:

"Motors, transformers, switchgears manufactured against orders of customers or for stocks should be credited to the respective finished goods stores only after all retinue tests ... whenever required, Customers inspection and acceptance whenever required, reworking manufacture if required, painting, finishing and packing where required. No product should be credited to stores unless it is ready for despatch in all respects."

ಈ ರೀತಿ ಇವತ್ತು ಸ್ಟಾಂಡಿಂಗ್ ಆರ್ಡರ್ ಇರತಕ್ಕದ್ದು. ಇದು ಎಷ್ಟರಮಟ್ಟಿಗೆ ಜಾರಿಯಾಗಿದೆ ಎಂದರೆ, ಯಾರು ಈ ಕಾರ್ಖಾನೆಯ ಅಧಿಕಾರ ಸೂತ್ರವನ್ನು ಇಟ್ಟುಕೊಂಡಿದ್ದಾರೆ, ಅವರಿಗೆ ಗೊತ್ತಿರಬೇಕಾದಂಥ ವಿಚಾರ ಇದು. ಇದು ಗೊತ್ತಿಲ್ಲದೇನೆ ಅಲ್ಲಿ ವ್ಯವಹಾರ ನಡೆಸಿದ್ದಾರೆ, ಅಂದರೆ ಅವರು ಯಾವರೀತಿಯಾಗಿ ವ್ಯವಹಾರ ನಡೆಸಿದ್ದಾರೆ ಎಂದರೆ ನಮಗೆ ಆಶ್ಚರ್ಯವಾಗುತ್ತದೆ. ಈ ಸ್ಟಾಂಡಿಂಗ್ ಆರ್ಡರ್‌ನ್ನು ಇವರು ಬದಿಗಿಟ್ಟು, ಕಸದ ಬುಟ್ಟಿಗೆ ಎಸೆದು ಒಂದು ಸಂದರ್ಭದಲ್ಲಂತೂ, ಈ

ರೀತಿ ಒಂದು ಸ್ಟಾಂಡಿಂಗ್ ಆರ್ಡರ್ ಇದೆ, ಇದರ ಪ್ರಕಾರ ಪ್ರೊಡಕ್ಷನ್ ಅನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಂಬ ವಿಚಾರವನ್ನು ಅಲ್ಲಿರತಕ್ಕಂಥ ಆಡಳಿತ ಮಂಡಳಿ ಸಭೆಯಲ್ಲೂ ಕೂಡ ಪ್ರಸ್ತಾಪವಾಗಿದೆ. ಆ ಒಂದು ಪ್ಯಾರಾ ಮಾತ್ರ ಇಲ್ಲಿ ಓದುವುದಕ್ಕೆ ಇಚ್ಛಿಪಡುತ್ತೇನೆ.

"Sri T.R. Krishne Gowda the then Production Director brought to the notice of the CMD and the other Directors in April 1987 that there have been gross overestimation of production for the year 1986-87 for products like transformers, switchgears and the matter was discussed in the board meetidng held on 19.6.87, subject No. 2100 and based on the note of the CMD supproted by clarifications given by Sri....." ಅಂತ ತಹೇಳಿ ಅವರದ್ದೇ ಆದ ಅಧಿಕಾರಿಗಳ ಒಂದು ಗುಂಪು ಏನಿದೆ, ಆ ಗುಂಪು, ಸಿ.ಎಂ.ಡಿ. ಆಗಿರತಕ್ಕಂಥ ಶ್ರೀಮಾನ್ ಪ್ರಭಾಕರ್ ರಾವ್ ಅವರಿಗೆ ಬೆಂಬಲವಾಗಿ ನಿಲ್ಲುತ್ತಾರೆ. ಮಾನ್ಯ ಅಧ್ಯಕ್ಷರೇ, ನಾನು ಸಭೆಯ ಗಮನಕ್ಕೆ ತರುವ ವಿಚಾರ ಯಾವುದೆಂದರೆ, ಒಂದನೆಯದಾಗಿ ಅಲ್ಲಿರತಕ್ಕಂಥ ಸ್ಟಾಂಡಿಂಗ್ ಆರ್ಡರ್ ಏನಿದೆ, ಅದರ ಬಗ್ಗೆ ಅನುಷ್ಠಾನ ಆಗಿಲ್ಲ. ಎರಡನೆಯದಾಗಿ, ಈ ರೀತಿ ಲೋಪವಾಗಿದೆ ಎನ್ನತಕ್ಕಂಥ ವಿಚಾರ ಬೋರ್ಡ್ ಆಫ್ ಡೈರೆಕ್ಟರ್ಸ್ ಮೀಟಿಂಗ್‌ನಲ್ಲಿ ಇದು ಪ್ರಸ್ತಾಪ ಆಗಿದ್ದರೂ ಕೂಡ ಅದನ್ನು ಸರಿಪಡಿಸತಕ್ಕಂಥ ಪ್ರಯತ್ನ ಪಡಲಿಲ್ಲ. ಅದಕ್ಕೆ ಬದಲಾಗಿ ಇವರು ಮಾಡಿದ್ದು ಏನೆಂದರೆ, ಇವರು ಮಾಡಿದ್ದೇ ಸರಿ, ಇವರು ಲೂಟಿ ಹೊಡೆಯುವುದಕ್ಕೆ ಯಾವ್ಯಾವ ರೀತಿಯಾಗಿ ಏನೇನು ಮಾಡಿದ್ದಾರೋ, ಏನೆಲ್ಲ ಅಕ್ರಮಗಳನ್ನು ಮಾಡಿದ್ದಾರೋ, ಅವೆಲ್ಲವೂ ಕೂಡ ಸಕ್ರಮ ಎಂಬ ವಾದವನ್ನು ಮಂಡಿಸಿ ಅದಕ್ಕೆ ಒಂದು ಉಪಸಮಿತಿಯನ್ನು ಮಾಡುತ್ತಾರೆ. ಈ ಉಪಸಮಿತಿಯ ವರದಿಯನ್ನು ಇವರು ಅನುಸರಿಸಿ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಬದಲಾಗಿ ಈ ತಪ್ಪೇ ಸರಿ ಎನ್ನತಕ್ಕದ್ದು, ಅಕ್ರಮವೇ ಸಕ್ರಮ ಎನ್ನುವ ರೀತಿಯಲ್ಲಿ ವ್ಯವಹಾರ ನಡೆಸಿದ್ದಾರೆ, ಇಲ್ಲಿ ಇನ್ನೂ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ, ವರದಿಯಲ್ಲಿ ಇರತಕ್ಕಂಥ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅದೇನೆಂದರೆ -

"No amendment has so far been issued to the standing instruction to give effect to the modification approved by the Sub-Committee of the Board." ಅಂದರೆ ಈ ಉಪಸಮಿತಿ ವರದಿ ಕೊಟ್ಟಮೇಲೆ ಇದಕ್ಕೆ ಸ್ಟಾಂಡಿಂಗ್ ಆರ್ಡರ್ ಅಮೆಂಡ್‌ಮೆಂಟ್ ತರಬೇಕಾಗಿತ್ತು. ಅದನ್ನು ಕೂಡ ಮಾಡಲಿಲ್ಲ. ಎಲ್ಲಿಯವರೆಗೆ ಇದಕ್ಕೆ ತಿದ್ದುಪಡಿಯನ್ನು ತರುವುದಿಲ್ಲ, ಅಲ್ಲಿಯವರೆಗೆ ಈ ಸ್ಟಾಂಡಿಂಗ್ ಆರ್ಡರ್ ಜಾರಿಯಲ್ಲಿರುತ್ತದೆ. ಸ್ಟಾಂಡಿಂಗ್ ಆರ್ಡರ್‌ಗೆ ತಿದ್ದುಪಡಿ ತರದೆ ಇವರು ಹೇಳಿದ್ದೇ ಕಾನೂನು, ಶ್ರೀ ಪ್ರಭಾಕರ್‌ರಾವ್ ಅವರು ಏನು ಎನ್.ಜಿ.ಇ.ಎಫ್.ನಲ್ಲಿ ಹೇಳಿದ್ದಾರೋ, ಅದೇ ಕಾನೂನು, ಬಾಯಿ ಮಾತಿನಲ್ಲಿ ಹೇಳಿದರೂ ಸಹ ಅದೇ ಕಾನೂನು, ಅಲ್ಲಿರತಕ್ಕಂಥ ಸ್ಟಾಂಡಿಂಗ್ ಇನ್‌ಸ್ಟ್ರಕ್ಷನ್ ಏನಿತ್ತು, ಕಂಪನಿ ಕಾನೂನು ಏನಿತ್ತು, ಅವೆಲ್ಲವನ್ನೂ ಗಾಳಿಗೆ ತೂರತಕ್ಕ ಕೆಲಸ ಮಾಡಿದ್ದಾರೆ. ಇದರಲ್ಲಿ ಯಾವರೀತಿ circumvent ಮಾಡಿದ್ದಾರೆಂದು ವಿವರವಾದ ವಿವರಗಳು ನನ್ನ ಹತ್ತಿರ ಇವೆ. ಕಾಲ ಕಡಿಮೆ ಇರುವ ಕಾರಣದಿಂದ, ಈ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ತಾತ್ಕಾಲಿಕವಾದಂಥ ವರದಿಯಲ್ಲಿ ಈ ಮ್ಯಾನೇಜಿಂಗ್ ಡೈರೆಕ್ಟರ್ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಸಭೆಯ ಗಮನಕ್ಕೆ ತರಬೇಕಾಗಿರುವುದು ನನ್ನ ಕರ್ತವ್ಯವೆಂದು ಹೇಳಿ, ಈ ಸಂಜರ್ಭದಲ್ಲಿ ಅವನ್ನು ಮಾತ್ರ ಓದುವುದಕ್ಕೆ ಇಷ್ಟಪಡುತ್ತೇನೆ-

"However, quite apart from the categorical statements made by the Executive Directors including the Executive Director (Finance), it is beyond doubt that the procedure of advance crediting was to say the least within the knowledge of the then Chairman and Managing Director."

The Then Chairman and Managing Director Sri Prabhakar Rao. ಆವರಿಗೆ ಇದು ಗೊತ್ತಿತ್ತು ಎನ್ನುವುದನ್ನು ಬಹಳ ಸ್ಪಷ್ಟವಾದ ಪದಗಳನ್ನು ಉಪಯೋಗಿಸಿ ವರದಿಯಲ್ಲಿ ನಮೂದು ಮಾಡಿದ್ದಾರೆ. ಇನ್ನೂ ಮುಂದಕ್ಕೆ ಹೋಗುತ್ತಾ,

"From the replies received and scrutiny of records- it is not only records were received but they were also scrutinised - I have no alternative to conclude that this malpractice was true to the fact that it was not reviewed as such by any of the top executives with exception of Sri T.R. Krishne Gowda whose remarks stand on different footing." ಇದನ್ನು ತಾವು ಗಮನಿಸಬೇಕು. ಏನೆಂದರೆ, If the responsibility is to be fixed, "the then CMD and Chiefs of Production as well as Finance have got to be held responsible."

ಇದು ನಾನು ಹೇಳತಕ್ಕಂಥ ಮಾತಲ್ಲ, ತನಿಖಾ ವರದಿಯಲ್ಲಿ ಈ ಮಾತನ್ನು ಉಲ್ಲೇಖ ಮಾಡಿದ್ದೇನೆ. ಇದು ಅಂತಿಮ ವರದಿಯಲ್ಲ, ಈ ವರದಿ ತಾತ್ಕಾಲಿಕವಾದ ವರದಿ. ಅಂತಿಮ ವರದಿಯಲ್ಲಿ ಇದರ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನೂ ಕೂಡ ಹೇಳಬೇಕಾದ ಅವಶ್ಯಕತೆ ಇದೆ. ಅಂತಿಮ ವರದಿಯಲ್ಲಿ, scope of investigation ಬಗ್ಗೆ ಹೇಳುತ್ತಾರೆ.

The investigation has two aspects. No.(1)- Fixing responsibility on the part of any official of the company for the omissions and commissions leading to the adoptation of incorrect accounting practices, and No.(2)- Suggesting institutional safeguards against recurrence of advance crediting and other practices which may have vitiated the accounts.

ಈ ಎರಡು ವಿಷಯಗಳ ಬಗ್ಗೆ ಈ ವರದಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಎಲ್ಲವನ್ನೂ ಕೂಡ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವೊಂದನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅಂತಿಮ ವರದಿಯ ಪುಟ 2ರಲ್ಲಿ,

"The investigation was extended to the previous years and in particular to the accounts of the year 1986-87 in respect of which Sri R.R. Krishne Gowda, Director (Production) has made specific allegation in his letter to the Board of Directors of the Company and to the State Govenment."

ಅವರು ಈ ವರದಿಯಲ್ಲಿ ಏನು ಹೇಳುತ್ತಾರೆಂದರೆ, ಕೇವಲ Board of Directors ಮೀಟಿಂಗ್‌ನಲ್ಲಿ ಮಾತ್ರ ಇದು ಪ್ರಸ್ತಾಪವಾಗಿಲ್ಲ, ಇದನ್ನು 1987ರಲ್ಲಿ ಸರ್ಕಾರಕ್ಕೂ ತಿಳಿಸಿದ್ದಾರೆ. ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಈ ರೀತಿಯಾಗಿ ಅಕ್ರಮ ನಡೆಯುತ್ತಿದೆ ಎಂದು ತಿಳಿಸಿದ್ದರೂ ಏಕೆ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ. ಏನಿದರ ಗುಟ್ಟು. ಇದರ ಗುಟ್ಟಿಗೆ ಆಮೇಲೆ ಬರುತ್ತೇನೆ. ಎನ್.ಜಿ.ಇ.ಎಫ್.ನಲ್ಲಿ ಏನೇನು ಗುಟ್ಟು ನಡೆದಿದೆ ಎಂದು ಹೇಳುತ್ತೇನೆ. ಹಿಂದೆ ಇದ್ದಂಥ ಸರ್ಕಾರವಾಗಲೀ,

ಈ ಸರ್ಕಾರವಾಗಲೀ ಇದರ ಬಗ್ಗೆ ಕಣ್ಣು ಹರಿಸತಕ್ಕ, ಇದರ ಬಗ್ಗೆ ಗಮನವನ್ನು ಹರಿಸತಕ್ಕ ಕೆಲಸವನ್ನು ಮಾಡಲೇ ಇಲ್ಲ.

ಉಪಾಧ್ಯಕ್ಷಣಿಯರು : ಮಾನ್ಯ ಬೈರೇಗೌಡರೇ, ಈಗಾಗಲೇ ತಾವು 35 ನಿಮಿಷ ಮಾತನಾಡಿದ್ದೀರಿ, ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ.

ಶ್ರೀ ಸಿ. ಬೈರೇಗೌಡ : ಇನ್ನು ಒಂದು ಘಂಟೆಯ ಮೇಲಾದರೂ ಬೇಕಾಗುತ್ತದೆ.

ಉಪಾಧ್ಯಕ್ಷರು : ಈಗ 32 ಜನರ ಪಟ್ಟಿ ನನ್ನ ಮುಂದೆ ಇದೆ. ಕೇವಲ 4-5 ಜನ ಮಾತ್ರ ಮಾತನಾಡಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾನು ಸಿಕ್ಕಾಪಟ್ಟೆ ಇಲ್ಲದಿತರತಕ್ಕಂಥದ್ದಾನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಏನು ಹೇಳುತ್ತೇನೆ, ಅದಕ್ಕೆ ಆಧಾರಗಳನ್ನು ಇಟ್ಟುಕೊಂಡು ಮಾತನಾಡುತ್ತೇನೆ. ಆದುದರಿಂದ ತಾವು ದಯಮಾಡಿ ನನ್ನ ಬಗ್ಗೆ ಔದಾರ್ಯವನ್ನು ತೋರಿಸಬೇಕು ಮತ್ತು ಹೆಚ್ಚು ಸಮಯ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇದು ಬಹಳ ಪ್ರಮುಖವಾದ ವಿಚಾರ.

ಉಪ್ಪ್ಲಕ್ಷರು : ಇನ್ನೂ 15 ನಿಮಿಷ ಮಾತನಾಡಿ.

ಶ್ರೀ ಸಿ. ಬೈರೇಗೌಡ : ನಾನು ಇನ್ನೂ ಕಾಲುಭಾಗ ಸಹ ಮುಗಿಸಿಲ್ಲ. ಟಾರ್ಪೆಡೋಗ್ ಬರಬೇಕಾಗಿದೆ, ಸಬ್‌ಮರ್ಸಿಬಲ್ ಪಂಪ್ಸ್‌ಗೆ ಬರಬೇಕಾಗಿದೆ.

ಉಪಾಧ್ಯಕ್ಷರು : ಇನ್ನು ಅರ್ಧ ಘಂಟೆ ಮಾತನಾಡಿ,

ಶ್ರೀ ಸಿ. ಬೈರೇಗೌಡ : ಇನ್ನು ಈ ವರದಿಯ ಮೂರನೇ ಪುಟದಲ್ಲಿ ಈ ರೀತಿ ಇದೆ.

"The observation in the interim report and quite apart from a categorical statement by the Executive Director, Finance -'It is beyond doubt that the proceddure of advance crediting was within the knowledge of the then C&MD. ಎಷ್ಟು ಕಡೆ ಹೇಳಿದ್ದಾರೆಂದು ತಾವೇ ನೋಡಿ.

"I had concluded that in responsibility is to be fixed the then C&MD and Chiefs of production as well as finance will have all got to be held responsible with the additional responsibility of devolving on the Executive Director, Finance for lack of attention to the veracity of the certified accounts".

ಎಲ್ಲಿ ಬೇಕಾದರೂ ರುಜು ಹಾಕುತ್ತಾರೆ. ಎನ್.ಜಿ.ಇ.ಎಫ್. ಮಾರಾಟ ಮಾಡಬೇಕು ಎಂದರೆ ಅದಕ್ಕೂ ರುಜು ಹಾಕುತ್ತಾರೆ. ಏತಕ್ಕೆ ಬೇಕಾದರೂ ರುಜು ಹಾಕುತ್ತಾರೆ. ಇದು ವರದಿಯಲ್ಲಿರುವ ಮಾತು, ಇದು ನನ್ನ ಮಾತಲ್ಲ. ಮತ್ತೆ ಪುಟ 4ರಲ್ಲಿ ಈ ರೀತಿ ಹೇಳಿದ್ದಾರೆ.

"If the allegation made by Sri T.R. Krishne Gowda, Director, Production had been properly investigated and corrective action taken irregular practices would have come to a stop atleast in the year 1986-87. Instead efforts were made to defend wrong figures of production. No effective steps were taken to curb irregular practice. On the contrary it has reached its peak after 1986-87."

ಇವರು ಮಾಡಿದ ಅಪರಾಧ ಏನೆಂದರೆ ಬೋರ್ಡ್ ಆಫ್ ಡೈರೆಕ್ಟರ್ಸ್ ಮೀಟಿಂಗ್‌ನಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದು. ಮತ್ತು ಸರ್ಕರದ ಗಮನಕ್ಕೆ ತಂದದ್ದು

ಅಪರಾಧ. ಈ ಅಪರಾಧಕ್ಕಾಗಿ ಮ್ಯಾನೇಜ್‌ಮೆಂಟ್ ತೆಗೆದುಕೊಂಡ ಕ್ರಮ ಏನೆಂದರೆ ಇನ್ನೂ ಹೆಚ್ಚು ಮಾಡಿದ್ದು. ಏನು ಮಾಡುತ್ತಾರೆ ನೋಡೋಣ, ಏನಾಗುತ್ತದೆ ನೋಡೋಣ ಎಂದು ಮಾಡಿದ್ದಾರೆ. ಈ ಅಕ್ರಮವನ್ನು ಮಿತಿಮೀರಿದ ಮಟ್ಟಕ್ಕೆ ತೆಗೆದುಕೊಂಡು ಹೋಗಿರತಕ್ಕಂಥದ್ದು. ಇದು ಅಲ್ಲಿ ನಡೆದಿರತಕ್ಕಂಥದ್ದು. ಅದೇ ರೀತಿ ಮುಂದಕ್ಕೆ they have also mislead the A.G.

"Even in response to the points raised by the A.G. (Karnataka) about over estimated profits due to the difference between estimated cost taken for crediting and the actual cost, no action has been taken to adjust the excess profit which was attributed to the practice of advance crediting. The reply given to the A.G. was in fact, misleading".

ಮಾನ್ಯ ಅಧ್ಯಕ್ಷರೇ, ಎ.ಜಿ.ಯವರನ್ನೂ ಮಿಸ್ ಲೀಡ್ ಮಾಡತಕ್ಕಂಥ ಪರಿಸ್ಥಿತಿಗೆ ಅಲ್ಲಿರತಕ್ಕಂಥ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್‌ರವರಾಗಿದ್ದ ಶ್ರೀಮಾನ್. ಎನ್.ಕೆ. ಪ್ರಭಾಕರರಾವ್ ಅವರು ಇವತ್ತು ಮುಖ್ಯ ಕಾರ್ಯದರ್ಶಿಯಾಗಿ ಮಾನ್ಯ ಮುಖ್ಯ ಮಂತ್ರಿಯವರ ಪಕ್ಕದಲ್ಲಿ ಕುಳಿತುಕೊಳ್ಳುತ್ತಾರೆ. ಕ್ಯಾಬಿನೆಟ್ ಮೀಟಿಂಗ್ನಲ್ಲಿ, ಈ ಸರಕಾರದ ಘನತೆ ಗೌರವ ಎಷ್ಟರಮಟ್ಟಿಗೆ ಇದೆ ಎಂಬುದರ ಬಗ್ಗೆ ನಾನು ಹೇಳುವುದಿಲ್ಲ. ಇಲ್ಲಿ ಮೊದಲನೇ ಸಾಲಿನಲ್ಲಿ ಮಂತ್ರಿಗಳು ಕುಳಿತಿದ್ದಾರಲ್ಲ, ಇವರು ಅರ್ಥ ಮಾಡಿಕೊಳ್ಳಬೇಕು. ಇನ್ನು ಮುಂದೆ ನಾನು ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಖರ್ಗೆಯವರು ಏತಕ್ಕೋಸ್ಕರ ನನ್ನ ಕಡೆ ನೋಡುತ್ತಿದ್ದಾರೆ. ಸ್ವಾಮಿ ಇದನ್ನು ಓದಿ. ಯಾರಯಾರನ್ನು ಮಿಸ್‌ಲೀಡ್ ಮಾಡಿದ್ದಾರೆ ಗೊತ್ತಾಗುತ್ತದೆ. ಎ.ಜಿ.ಯವರನ್ನು ಸಹ ಮಿಸ್‌ಲೀಡ್ ಮಾಡಿದ್ದಾರೆ.

ಇನ್ನು ನಿಮ್ಮನ್ನು ಮಿಸ್‌ಲೀಡ್ ಮಾಡದೆ ಇರುತ್ತಾರೆಯೇ ಕ್ಯಾಬಿನೇಟ್ ಮೀಟಿಂಗ್‌ನಲ್ಲಿ....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ನೀರು ಕುಡಿಯಿರಿ.

ಶ್ರೀ ಸಿ. ಬೈರೇಗೌಡ : ನೀರು ಕುಡಿಯಿರಿ ಎಂದು ಹೇಳುತ್ತಾರೆ. ನಾನು ನೀರು ಕುಡಿಯುತ್ತೇನೆ. ಆದರೆ ಈ ರಾಜ್ಯದ ಜನತೆಗೆ ನೀರು ಕುಡಿಸಲು ಹೋಗಬೇಡಿ. ಇವರನ್ನು ನೀವು ಮುಖ್ಯ ಕಾರ್ಯದರ್ಶಿಗಳಾನ್ನಾಗಿ ಇಟ್ಟುಕೊಂಡು ಇದ್ದೀರಿ. ಇವರು ಎಲ್ಲರನ್ನೂ ಮಿಸ್‌ಲೀಡ್ ಮಾಡತಕ್ಕಂಥವರು. ಇಂತಹವರನ್ನು ಮುಖ್ಯ ಕಾರ್ಯದರ್ಶಿಗಳಾಗಿ ಇಟ್ಟುಕೊಂಡು ರಾಜ್ಯದ ಜನತೆಗೆ ಮಿಸ್‌ಲೀಡ್ ಮಾಡುವುದಕ್ಕೆ ಹೋಗಬೇಡಿ ಮತ್ತು ರಾಜ್ಯದ ಜನತೆಗೆ ನೀರು ಕುಡಿಸಲು ಹೋಗಬೇಡಿ. ಇವತ್ತಿನ ದಿವಸ ಅದು ನನ್ನ ಕನ್‌ಸರ್ನ್. ಅದು ನನ್ನ ಚಿಂತನೆ. ಅದೇ ರೀತಿ ಮುಂದಕ್ಕೆ ಹೋಗಿ ಏನು ಹೇಳುತ್ತಾರೆಂದು ನೋಡಿ. ನಾನು ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಬಹಳ ಸ್ವಾರಸ್ಯಕರವಾದ ಉತ್ತರ ಕೊಟ್ಟಿದ್ದಾರೆ. ಮಾನ್ಯ ಖರ್ಗೆಯವರೇ ತಾವು ಸ್ವಲ್ಪ ಅಲರ್ಟ್ ಆಗಿರಬೇಕು. ಇಲ್ಲಿ 8ನೇ ಪುಟದಲ್ಲಿ ನೋಡಿ ಏನು ಹೇಳಿದ್ದಾರೆಂದು ನೋಡಿ,

"In a few cases advance crediting when the product has come to the testing stage might have occured due to pressure on management to make financial institutions and commitments".

ಇದು ಏತಕ್ಕೆ ಆಗಿದೆ ಅಂದರೆ ಇದು ಹೇರ್ಸ್ ಆಫ್ ಪ್ರೊಡಕ್ಷನ್ ಶ್ರೀ ಕೆ.ಜಿ. ಷಣ್ಮುಕ್ಕಪ್ಪ ಎಕ್ಸಿಕ್ಯೂಟಿವ್ ಡೈರೆಕ್ಟರ್ ಟಿ.ಸಿ.ಆರ್.ಎನ್.ಡಿ.ಎಫ್. ಅಂಡ್ ಪಿ.ಎಂ.ಎಸ್. ಅಂತ ಇವರು ಸಹ ಒಬ್ಬ ಡೈರೆಕ್ಟರ್ ಅವರ ಮೇಲೆ ಕೂಡ ಒತ್ತಡ. ಏನಂತ ಅಂದರೆ ನೀವು ಉತ್ಪತ್ತಿ ಹೆಚ್ಚು ಆಗಿದೆ ಎಂದು ನಿಮ್ಮ ವರದಿಯಲ್ಲಿ ಕೊಡಿ ಎಂದು. ಅದು ಈ ವರದಿಯಿಂದ ಸ್ಪಷ್ಟವಾಗುತ್ತದೆ.

ಇದು ಬರೀ ಹೆಡ್ಸ್ ಆಫ್ ಪ್ರೊಡಕ್ಷನ್‌ನಲ್ಲಿ ಜವಾಬ್ದಾರಿ ಇರುವುದು, ಅವರ ಮೇಲೆ ಸಹ ಒತ್ತಡ ತಂದು ಯಾವ್ಯಾವುದು ತಯಾರು ಆಗುವುದಿಲ್ಲವೋ ಅವೆಲ್ಲವೂ ತಯಾರಾಗಿದೆ ಎಂದು ಹೇಳಿ ಬರೆದು ಕೊಡಬೇಕೆಂದು ತಮ್ಮ ದಬಾವಣೆ ಸೆಕ್ಷನ್ ಇದು. ಪ್ರಭಾಕರರಾವ್‌ರವರ ದಬಾವಣೆ ಸೆಕ್ಷನ್ ಮೂಲಕ ಅವರಿಂದ ತಪ್ಪು ವರದಿಗಳನ್ನು ತೆಗೆದುಕೊಂಡಿರತಕ್ಕಂಥಾದ್ದರ ಬಗ್ಗೆ ಅವರೇ ಹೇಳುತ್ತಾರೆ. ನಾನು ಹೇಳುತ್ತಿಲ್ಲ. ~Due ot the pressure of management'. ಇಲ್ಲಿ ಮ್ಯಾನೇಜ್‌ಮೆಂಟ್ ಅಂದರೆ ಯಾರು? Your pet Mr. N.K.. Prabhakar Rao, the present Chief Sercretary. ಅದೇ ರೀತಿ ಅವರೊಬ್ಬರೇ ಹೇಳುತ್ತಿಲ್ಲ. ಶ್ರೀ ಹೀರಾ ಲಾಲ್, ಎಕ್ಸಿಕ್ಯೂಟೀವ್ ಡೈರೆಕ್ಟರ್ ಎಸ್.ಎಫ್. ಅಂಡ್ ಎಂ.ಇ.ಡಿ. ಅವರು ಹೇಳುತ್ತಾರೆ. In his reply he has stated that every year depending on the target set on the instructions of the management at different points....."

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ನಿಮಗೂ ಪೆಟ್ಟು ಇದ್ದರು. ಅವರು ನಿಮ್ಮ ಕಾಲದಲ್ಲಿಯೇ ಅಲ್ಲಿಗೆ ಹೋದರು.

ಶ್ರೀ ಸಿ. ಬೈರೇಗೌಡ : ಆ ಬಗ್ಗೆ ಹೇಳುತ್ತೇನೆ. ಆ ಬಗ್ಗೆ ಯಾರಾದರೂ ತೀವ್ರವಾದ ಕ್ರಮ ತೆಗೆದುಕೊಂಡಿದ್ದರೆ, ಅದು ನಾನೆ. 4-5 ಪುಟಗಳ ಪತ್ರಕ್ಕೆ ನಾನೇ ರುಜು ಮಾಡಿ ಅಂದಿನ ಮುಖ್ಯಮಂತ್ರಿಗಳಿಗೆ ಒಂದು ಮೆಮೋರಂಡಂ ಮೂಲಕ 18 ಜನ ಕೈಯಲ್ಲಿ ಸಹಿ ಮಾಡಿಸಿ ಅಂದಿನ ಛೇರ್ಮನ್ ಎಂ.ಡಿ. ಕಾಲದಲ್ಲಿ ಈ ಅವ್ಯವಹಾರಗಳ ಬಗ್ಗೆ 18ಜನ ಸದಸ್ಯರ ಕೈಯಲ್ಲಿ ರುಜು ಮಾಡಿಸಿ ತೆಗೆದುಕೊಂಡುಹೋಗಿ ಅಂದಿನ ಮುಖ್ಯಮಂತ್ರಿಗಳಿಗೆ ಕೊಟ್ಟಿರತಕ್ಕಂಥಾದ್ದು ಮುಖ್ಯಮಂತ್ರಿಗಳ ಕಛೇರಿಯಲ್ಲಿ ದಾಖಲೆ ಇದೆ, ತಾವು ನೋಡಿ, ನಾನು ಏನೂ ಮಾಡಿಲ್ಲ ಎನ್ನುವ ಅಭಿಪ್ರಾಯಕ್ಕೆ ತಾವು ಬರಬೇಡಿ.

"In his reply he has stated that every year depending up on the target set on the instructions of the management at different points of time product were credited at various stages for completion and that during the last month of the year even the percentage on completed products were further diluted and the production targets were declared as completed for the particular year". ಇದನ್ನು ನಾನು ಹೇಳುತ್ತಿಲ್ಲ. ಶ್ರೀ ಹೀರಾಲಾಲ್ ಅವರು ಹೇಳಿರತಕ್ಕಂಥ ಮಾತು. ಅವರ ನಿರ್ದೇಶನದ ಮೇಲೆ ಆಗಿದ್ದು ಎಂಬ ಮಾತನ್ನು ಅವರೇ ಹೇಳಿದ್ದಾರೆ. ಉಳಿದಂತಹ ಪ್ಯಾರಾ ನಾನು ಓದುವುದಕ್ಕೆ ಹೋಗುವುದಿಲ್ಲ, ಸಮಯದ ಅಭಾವದ ಕಾರಣ.

1.10 ಪಿ.ಎಂ.

ಆಮೇಲೆ ವಿಶ್ವನಾಥ ಎನ್ನುವವರು ಎಕ್ಸಿಕ್ಯುಟೀವ್ ಡೈರೆಕ್ಟರ್, ಮೋಟಾರ್ ಫ್ಯಾಕ್ಟರಿ. ಇವರು ಏನು ಹೇಳುತ್ತಿದ್ದಾರೆ? ಇವರು ಕೊಟ್ಟಿರತಕ್ಕಂಥ ಅಭಿಪ್ರಾಯ ಏನಿದೆಯೆಂದರೆ:

"He has also confirmed that due to dictates from the Management to meet some of the requirements of some of the financial institutions, dilutions took place in declaring advance payments."

ಇದನ್ನು ಸಂಬಂಧಪಟ್ಟ ಹೆಡ್ಸ್ ಆಫ್ ಪ್ರೊಡಕ್ಷನ್‌ನವರು ಹೇಳಿರತಕ್ಕಂತಾದ್ದು ಮಾನ್ಯ ಅಧ್ಯಕ್ಷರೆಯವರೇ, ಇಷ್ಟು ಹೇಳುತ್ತಾ, ಈ ಕರ್ಮ ಕಥೆ ಏನಿದೆ? ಇದು ಇಷ್ಟಕ್ಕೆ ನಿಲ್ಲಲಿಲ್ಲ. ಈ ಸದನದ ಒಂದು ಸಮಿತಿ ಇದೆ. ಈ ಸದನದ ಸಮಿತಿ ಏನು ಹೇಳುತ್ತದೆ ಅನ್ನತಕ್ಕಂಥ ಮಾತನ್ನು ಇಲ್ಲಿ ಹೇಳಬೇಕಾಗಿರುವುದು ಅವಶ್ಯಕ

ಇದೆ. ಇದು ಎನ್.ಜಿ.ಇ.ಎಫ್. ಬಗ್ಗೆ ವರದಿ ಕೊಟ್ಟಿದೆ. The Committee on Public Undertakdings, in its 41st report on NGEF. 1988-89, (presented on 13th April 1989), have clearly stated various things.

ಈ ವರದಿಯಲ್ಲಿ ಏನು ಹೇಳಿದ್ದಾರೆ ಅನ್ನತಕ್ಕಂಥಾದ್ದನ್ನು ಹೇಳುತ್ತಾನೆ. ಇದರಲ್ಲಿ ಬಹಳ ಹೇಳಿದ್ದಾರೆ, ಈ ವರದಿಯನ್ನು ಇಲ್ಲಿಯವರೆಗೆ ನಾವು ರದ್ದು ಮಾಡತಕ್ಕಂಥಾದ್ದಕ್ಕೆ ಹೋಗಿಲ್ಲ. ಅಂದರೆ ಈ ವರದಿ ಇಲ್ಲಿಯವರೆಗೂ ಜಾರಿಯಲ್ಲಿದೆ. ಇದರ ಬಗ್ಗೆ ಸರ್ಕಾರ ಇದುವರೆಗೆ ಏನೂ ಕ್ರಮ ಕೈಗೊಂಡಿಲ್ಲ. ಕೆಲವು ಅಂಶಗಳನ್ನು ನಾನು ಸಭೆಯ ಗಮನಕ್ಕೆ ತರಬೇಕಾದುದು ನನ್ನ ಕರ್ತವ್ಯ. ಇದು 41ನೇ ರಿಪೋರ್ಟ್. ಇದು ಯಾವಾಗ ಪ್ರಾರಂಭವಾಯಿತೆಂದು ಈ ಸಮಿತಿಯ ವರದಿಯಲ್ಲಿ ಹೇಳಿದ್ದಾರೆ. ಇದು ನನ್ನ ಮಾತಲ್ಲ. ಸಮಿತಿಯ ವರದಿಯಲ್ಲಿರುವ ಮಾತನ್ನು ನಾನು ಓದುತ್ತೇನೆ:

"The Chairman and M.D. indicated that soon-after he assumed charge as Chairman and MD in September 1983 when the technical performance of some of the transformers manufactured during 1983-84 was found to be far below...."

ಇದು ಟ್ರಾನ್ಸ್‌ಫಾರ್ಮರ್‌ಗಳ ಬಗ್ಗೆ ಹೇಳುತ್ತಿದ್ದೇನೆ. ಮುಂದೆ ಈ ವರದಿಯಲ್ಲಿರತಕ್ಕಂಥ ಕೆಲವು ಪ್ರಮುಖ ರೆಕಮೆಂಡೇಷನ್‌ಗಳು ಏನಿವೆ ಅವುಗಳನ್ನು ಮಾತ್ರ ಹೇಳುತ್ತೇನೆ. ಈ ವರದಿಯ 26ನೇ ಪುಟದಲ್ಲಿ ಪ್ಯಾರಾ 2.27ರಲ್ಲಿ

"The fact that the investment on crane pressurisation of the winding section was just about Rs. 34 lakhs. Further Rs.45 lakhs.... foolishness of the decisions taken in this behalf."

ಮಾನ್ಯ ರಂಗನಾಥ್‌ರವರೇ, ತಾವು ಈ ಸದನದಲ್ಲಿ ಅಧ್ಯಕ್ಷರಾಗಿದ್ದಿರಿ ಮತ್ತು ಮಂತ್ರಿಗಳಾಗಿದ್ದಿರಿ, ಲೋಕಸಭಾ ಸದಸ್ಯರಾಗಿದ್ದಿರಿ ಪಾರ್ಲಿಮೆಂಟರಿ ಪ್ರ್ಯಾಕ್ಟೀಸ್ ಬಗ್ಗೆ ಬಹಳ ಕಾಳಜಿ ಇರುವವರು ಆದ್ದರಿಂದ ಇಲ್ಲಿ ಏನು ಪದ ಬಳಸಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಇಲ್ಲಿ ಏನು ಪದ ಬಳಸಿದ್ದಾರೆ, "foolishness".ಇದನ್ನು ಸಾರ್ವಜನಿಕ ಉದ್ದಿಮೆಗಳ ಸಮಿತಿಯವರು ಹೇಳಿರುವುದು. ಇದು ನನ್ನ ಮಾತಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ನನಗೆ ಏಕೆ ಹೇಳುತ್ತೀರಿ? ಸದನದ ಗಮನಕ್ಕೆ ತನ್ನಿ. ನಾನು ಫೂಲಿಶ್ ಅಂದರೆ ಮೇಲೆ ಬಿದ್ದು ಬಿಡ್ತುತ್ತಾರೆ ಮಾನ್ಯ ಶಿವಮೂರ್ತಿಯವರು. ನಾನು ಹೇಳಿರತಕ್ಕ ಮಾತ್ಲು, ಫೂಲಿಶ್ ಎನ್ನುವ ಪದ ಬಳಕೆ ಆಗಿರತಕ್ಕದ್ದು ಪಿಎಸಿ ಅವರಿಂದ. ಅವರು ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳ ಪಕ್ಕದಲ್ಲಿ ಕುಳಿತು ಅವರ ಕಿವಿಯಲ್ಲಿ ಹೇಳುತ್ತಾರೆ. ನಿಮ್ಮ ಕ್ಯಾಬಿನೆಟ್ ಮೀಟಿಂಗ್ನಲ್ಲಿ ಪಕ್ಕದಲ್ಲಿ ಕುಳಿತುಕೊಂಡು ನಿಮ್ಮ ಮುಖ್ಯ ಕಾರ್ಯದರ್ಶಿಗಳು ಆಗಿರತಕ್ಕಂಥವರ ಬಗ್ಗೆ ಬರೆದಿರತಕ್ಕಂಥಹ ಫೂಲೀಶ್‌ನೆಸ್ ಎನ್ನುವ ಪದ.

Sri. A.K. ANANTHA KRISHNA : Foolishness is not an act of crime.

ಶ್ರೀ ಸಿ. ಬೈರೇಗೌಡ : ಕ್ರೈಮ್ ಬಗ್ಗೆ ಮುಂದೆ ಬರುತ್ತೇನೆ. ನಾನು ಅದನ್ನು ಅಬ್ಜೆಕ್ಟ್ ಮಾಡುವುದಿಲ್ಲ. If you stick to that position, I don't object. This is the type of Chief Secretary this Government is having against whom the Committee on Public Undertakings has passed remarkd as "Foolishness". Should we call him as a fool?

ನಾನು ಅದನ್ನು ತೀರ್ಮಾನ ಮಾಡತಕ್ಕದ್ದಕ್ಕೆ ನಿಮ್ಮ ಸರ್ಕಾರಕ್ಕೆ ಬಿಟ್ಟು ಬಿಡುತ್ತೇನೆ. ಫೂಲ್ ಎಂತಲಾದರೂ ಕರೆದುಕೊಳ್ಳಿ, ಏನು ಬೇಕಾದರೂ ಕರೆದುಕೊಳ್ಳಿ. ಆದರೆ ಪಿ.ಯು.ಸಿ ಅವರು ಹೇಳಿರತಕ್ಕಂಥಹದು 'ಹಿ ಈಸ್ ಫೂಲ್' ಎಂದು ಹೇಳಿದ್ದಾರೆ. ಇದನ್ನು ತೀವ್ರವಾಗಿ ಗಮನಿಸಿರಬೇಕಾಗಿರತಕ್ಕದ್ದು. ಇನ್ನೂ ಆ ಪ್ಯಾರಾದಲ್ಲಿ ಏನು ಹೇಳುತ್ತಾರೆ ಅಂದರೆ:

"Wrong technical decisions ultimately resulting in the loss of Rs. 3 Crores does not merit fixation of personal responsibility, as asserted by the Company. Then the Committee fails to understand what else it merits? Hence the Committee is strongly recommends fixation of personal responsibility and severe punishment commensurate with the loss accrued...."

ಮಾನ್ಯ ಅನಂತಕೃಷ್ಣ ಅವರೇ, ತಾವು ಈ ಪ್ಯಾರಾ ಬಗ್ಗೆ ಏನು ಹೇಳುತ್ತೀರಿ.

Foolishness is not an act of crime and it is not criminal. This is what Sri Ananthakrishna said. Then, what is this Act? ಇದಕ್ಕೆ ಏನು ಹೇಳುತ್ತೀರೋ ಎಂದು ಅದನ್ನು ತಮ್ಮ ಗಮನಕ್ಕೆ ತಂದೆ. ನಾವು ಹೇಳಿದರೆ ಅವರಿಗೆ ಸಿಟ್ಟುಬರುತ್ತದೆ. ಈ ಬಗ್ಗೆ ಅವರೇ ಹೇಳಲಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಪಿ.ಯು.ಸಿ. ಕಮಿಟಿಯವರು ಫೂಲ್ ಎಂದು ಹೇಳಿರಬೇಕಾದಂತಹ ವ್ಯಕ್ತಿಯನ್ನು ಈ ರಾಜ್ಯದ ಮುಖ್ಯ ಕಾರ್ಯದರ್ಶಿಗಳಾಗಿ ಮಾಡಿದಬೇಕಾದರೆ ಈ ಸರ್ಕಾರಕ್ಕೆ ಏನು ಅನ್ನಬೇಕು? ನಿಮ್ಮ ಸರ್ಕಾರವನ್ನು ಯಾವ ರೀತಿ ವರ್ಣನೆ ಮಾಡಬೇಕು?

C. BYRE GOWDA : What is the action the Govenment has taken to fix the personal responsibility on the present C.S? Why the Govt. is sleeping over the matter?

ಯಾಕೇ? ಏನು ಅವರ ಔದಾರ್ಯ. ಜನರ ಕಣ್ಣಿಗೆ ಮಣ್ಣು ಎರಚತಕ್ಕ ಕೆಲಸ ಇದು. ನಾನು ಕೊನೆಯಲ್ಲಿ ಹೇಳುತ್ತೇನೆ. ಇದಾದ ಮೇಲೆ ನಾನು ಒಂದು ಪತ್ರಿಕಾ ಹೇಳಿಕೆ ಕೊಟ್ಟರೆ ನಿಮ್ಮ ಡಿಪಿಎಆರ್ ನಿಂದ ಒಂದು ಹೇಳಿಕೆ ಬರುತ್ತದೆ. ಇವರ ಮೇಲೆ ಯಾವ ಎನ್‌ಕ್ವೈರಿ ಮತ್ತಿತರ ವಗೈರೆಗಳು ಇಲ್ಲ, ಪೆಂಡಿಂಗ್ ಎನ್‌ವೈರಿ ಯಾವುದೂ ಇಲ್ಲ ಎಂಬ ಒಂದು ಹೇಳಿಕೆ ಬರುತ್ತದೆ. ಯಾರಿಗೆ ನೀವು ಫೂಲ್ ಮಾಡತಕ್ಕದ್ದು. You are trying to defend such man by issuing foolish statements. This Govenment has become the fools paradise.

ನೀವು ಯಾರನ್ನು ಫೂಲ್ ಮಾಡುವುದಕ್ಕೆ ಹೋಗುತ್ತಿದ್ದೀರಿ. ಇದರಲ್ಲಿ ಸತ್ಯಾಂಶ ಇದೆ. ಇದು ಈ ಸದನದ ವರದಿ. ಇದನ್ನು ಸದನ ರಿಜೆಕ್ಟ್ ಮಾಡುವವರೆಗೆ ಕೂಡ ಇದು ಸದನದ ವರದಿ ಆಗಿರುತ್ತದೆಂದು ನಾವು ತೀರ್ಮಾನ ಮಾಡಬೇಕಾಗುತ್ತದೆ. ನಾವು ಇದೇ ಸತ್ಯಾಂಶ ಎಂದು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ವರದಿಯಲ್ಲಿ ಈ ತರದ ಇವರ ಬಗ್ಗೆ ಉಲ್ಲೇಖ ಇದ್ದರೂ ಸಹ ಅವರನ್ನು ಡಿಫೆಂಡ್ ಮಾಡತಕ್ಕ ಹೇಳಿಕೆ ಸರ್ಕಾರದಿಂದ ಬರುತ್ತದೆ. ನಾಚಿಕೆ ಆಗಬೇಕು ಯಾರಿಗಾದರೂ ಕೂಡ. ಮಾನ ಮರ್ಯಾದೆ ಏನೂ ಇಲ್ಲ ಈ ಸರ್ಕಾರಕ್ಕೆ. ನಾಚಿಕೆ ಎಂಬುದು ಮೊದಲೇ ಇಲ್ಲ. ಇನ್ನೂ ಮುಂದೆ ಇದೆ, ಅವರು ಅಂದರೆ ಪಿ.ಯು.ಸಿ. ಅವರು ಏನೇನು ಪದ ಬಳಸಿದ್ದಾರೆ ಎಂದು ಅದನ್ನು ಹೇಳುವುದಕ್ಕಾಗಿ ಅದರಲ್ಲಿ ಇರುವುದನ್ನು ನಾನು ಓದುವುದಕ್ಕೆ ಇಷ್ಟಪಡುತ್ತೇನೆ. ಪಿಯುಸಿ ಅವರ ವರದಿಯಲ್ಲಿರತಕ್ಕ ಪದ.

ಶ್ರೀ ಜಿ.ಎಸ್. ಶಿವನಂಜಪ್ಪ : ನಿಮ್ಮ ಸರ್ಕಾರ ಇದ್ದಾಗಲೂ ಅವರು ಇದ್ದರು. ಸುಮ್ಮನೇ ನಮ್ಮ ಮೇಲೆ ಯಾಕೆ ಕೂಗಾಡುತ್ತಿದ್ದೀರಿ?

ಶ್ರೀ ಸಿ. ಬೈರೇಗೌಡ : ಅವರು ಕಡಿಮೆ ಫೂಲ್ಸ್. ನೀವು ಫೂಲ್ಸ್ ಆಫ್ ದಿ ಫೂಲ್ಸ್?

ಮುಂದೆ ಪ್ರೊಡಕ್ಷನ್ ಬಗ್ಗೆ ಏನು ಹೇಳಿದ್ದಾರೆಂದರೆ:

"The Committee regrets to state that the actual production performance in the first two quarters of all the three years ended 31st March, 1988 in all the product groups was even less than the low targets fixed for the quarters, despite the production facilities available being uniform throught the year and also the Board urging time and again to maintain uniform production throughout the year."

ಅಂದರೆ ಪ್ರೊಡಕ್ಷನ್ ಯಾವ ರೀತಿ ಫ್ಲಕ್ಚುಯೇಟ್ ಆಗುತ್ತಿತ್ತು ಎಂಬುದರ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಅದು ಕಮಿಟಿಯ ಓಪಿನಿಯನ್ ಅಷ್ಟೆ ಗೌಡರೆ,

ಶ್ರೀ ಸಿ. ಬೈರೇಗೌಡ : It is the opinion based on facts.

SRI K.H. RANGANATH : It is the opinion of the Committee. It must be further scrutinised.

SRI C. BYREGOWDA : I agree, but it is based on facts.

SRI A.K. ANANTHA KRISHNA : Opinion is not the decision of the Government, It should be reviewed and some action should be taken. Decision may be anything including a final decision.

SRI H. EKANTHAIAH : The observation made by the Committee, unless it is rejected by the House, stands.

SRI C.BYREGOWDA : I quite agree. But this observation of the Committee is based on the facts which came up before the Committee.

SRI K.H. RANGANATH : The Committees are elected by the Hon'ble House ಅವರು ಬರೆದಿರುವುದರ ಬಗ್ಗೆ ಫಾಲೊ ಅಪ್ ಆಕ್ಷನ್ ತೆಗೆದುಕೊಳ್ಳದಿರುವುದರಿಂದ ಈ ಅಧಿಕಾರಿಗಳ ವರ್ಗ ಕುಣಿಯುತ್ತಾ ಹೋಗುತ್ತದೆ. ಅವರು ನಮ್ಮನ್ನು ಫೂಲ್ ಮಾಡುತ್ತಿದ್ದಾರೆ. ಅನುಯಲ್ ರಿಪೋರ್ಟ್ ಬಂದ ಕೂಡಲೇ ಅದನ್ನು ಸ್ಕ್ರುಟಿನಿ ಮಾಡಿ ಸತ್ಯಾಂಶ ಏನಿದೆ ಎಂದು ತಿಳಿದುಕೊಂಡು, ಅದರ ಮೇಲೆ ಯಾವ ಮೇಜರ್ಸ್ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಸರಿಯಾದ ಶಿಕ್ಷೆ ಕೊಟ್ಟಿದ್ದರೆ ಇದೆಲ್ಲ ಸರಿಹೋಗುತ್ತಿತ್ತು. ಇಲ್ಲದೇ ಹೋದರೆ ಒಂದು ಕಮಿಟಿ ಮಾಡುತ್ತೇವೆ. ನಾವು ನೀವೂ ಮೆಂಬರಾಗುತ್ತೇವೆ. ಟಿಎ ಡಿಎ ತೆಗೆದುಕೊಂಡು ಒಂದು ರಿಪೋರ್ಟ್ ಕೊಡುತ್ತೇವೆ, ಅದು ಅಲ್ಲೇ ಬಿದ್ದುಹೋಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ರಂಗನಾಥ್ ಅವರು ಹೇಳಿದಂತೆ ಆಕ್ಷನ್ ತೆಗೆದುಕೊಳ್ಳುವ ಪ್ರವೃತ್ತಿ ಯಾವ ಸರ್ಕಾರದಲ್ಲೂ ಇಲ್ಲ, ಈಗ ಯಾವ ಒಂದು ಪ್ರವೃತ್ತಿ ಇದೆ ಅಂದರೆ ಅವರು ನಿಧನರಾಗಬೇಕು ಇಲ್ಲ ನಿವೃತ್ತರಾಗಬೇಕು. ಆಗ ಮಾತ್ರ ಇದನ್ನು ನೋಡುವ ಪ್ರವೃತ್ತಿ ಇರುವುದಿಂದ ಇಂತಹ ಪರಿಸ್ಥಿತಿ ಬರುತ್ತಿದೆ,

ಮಾನ್ಯ ರಂಗನಾಥ್‌ರವರು ಹೇಳಿದಂತೆ ಯಾವುದೇ ಸರ್ಕಾರ ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳದಿರುವುದರಿಂದ ಈ ರೀತಿಯ ಅನ್ಯಾಯಗಳು ಆಗುತ್ತಿವೆ.

SRI K.H. RANGANATH : This report is the report of the House. This House has become important and therefore things go on like this.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅನಂತಕೃಷ್ಣ ಅವರು ಶಾಸಕಾಂಗ ಪಕ್ಷದ ಕಾರ್ಯದರ್ಶಿಗಳು. ಅವರು ತಮ್ಮ ಸ್ಥಾನಕ್ಕೆ ಹೋಗಿ ಅಲ್ಲಿಂದ ಮಾತಾಡಬೇಕೇ ಹೊರತು ಬೇರೆಯವರ ಸ್ಥಾನದಿಂದ ಮಾತನಾಡುವುದು ಸರಿಯಲ್ಲ.

ಶ್ರೀ ಸಿ.ಬೈರೇಗೌಡ : ಏಕೆ ಹೀಗೆಲ್ಲ ಆಗುತ್ತದೆಂದರೆ ತಪ್ಪಿತಸ್ಥರ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳದಿರುವುದರಿಂದ ಇಲ್ಲಿ ಏನಾಗಿದೆ ಎಂದರೆ ಆರೋಪಿಯನ್ನೇ ಮುಖ್ಯ ಕಾರ್ಯದರ್ಶಿಯನ್ನಾಗಿ ಮಾಡಿ ಕೂರಿಸಿಕೊಂಡಿದ್ದಾರೆ. ಇದು ಇವರ ಕ್ರಮ. The action taken by the Government is to elevate him to the position of the Chief Secretary who has been called as a fool.

SRI H. EKANTHAIAH : Is it based on the observation of the Committee?

SRI C. BYREGOWDA : I cannot say as to what is the basis. There may be so many things for the Government which everyone knows. I further quote from the report of the Committee.

"The facts and figures furnished to the Committee regarding the availability of work force and mechanical force prove that the management has miserably failed in obtaining uniform production throughout the year despite existence of adequte work force and introduction of the production incentive schemes. The committee strongly denounces the long cultivated habit of low production during the first half year to be made up by increased production during the second half year by resorting to increased overtime payments despite existence of suplus labour in almost all production units. The committee hopes that this cultivated habit would be given a go by immediately."

The immediate action that was taken by the Government is to make him the Chief Secretary.

ಶ್ರೀ ಕೆ.ಹೆಚ್. ರಂಗನಾಥ್ : ರಿಪೋರ್ಟ್ ಸದನಕ್ಕೆ ಕೊಟ್ಟಿರುವುದು ಯಾವಾಗ ಹೇಳಿ?

ಶ್ರೀ ಸಿ. ಬೈರೇಗೌಡ : ಇದು ಸದನದಲ್ಲಿ ಪ್ರೆಸೆಂಟ್ ಆಗಿರುವುದು 13-4-89 ರಂದು ಅಷ್ಟರಲ್ಲಿ ರಾಜ್ಯಪಾಲರ ಆಳ್ವಿಕೆ ಬಂತು. ಆಮೇಲೆ ತಾವು ಅಧಿಕಾರಕ್ಕೆ ಬಂದಿದ್ದೀರಿ. ಒಂದು ವರ್ಷದ ಮೇಲಾಯಿತು. ಇಲ್ಲಿಯವರೆಗೆ ನಿಮ್ಮ ಸಾಧನೆ ಏನೆಂದರೆ ಈ ವರದಿಗಳನ್ನೆಲ್ಲಾ ಕಸದ ಬುಟ್ಟಿಗೆ ಹಾಕಿರುವುದು. ಇದನ್ನು ನಾವು ಸಾರ್ವಜನಿಕರ ಗಮನಕ್ಕೆ ತಂದರೆ ಅಲ್ಲಿ ಏನೂ ನಡೆದಿಲ್ಲವೆಂದು ಡಿ.ಪಿ.ಎ.ಆರ್. ನವರಿಂದ ಪತ್ರಿಕಾ ಹೇಳಿಕೆ ಕೊಡಿಸಿ ಅವರನ್ನು ಅಧಿಕಾರದ ತುತ್ತ ತುದಿಗೆ ಏರಿಸಿದ್ದೀರಿ. ಇದು ನಿಮ್ಮ ಕ್ರಮ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮುಖ್ಯ ಕಾರ್ಯದರ್ಶಿ ಹುದ್ದೆಗೆ ತಮಗೆ ಬೇಕಾದ ವ್ಯಕ್ತಿಯನ್ನು ಆರಿಸಿಕೊಳ್ಳಲು ಈ ಸರ್ಕಾರಕ್ಕೆ ಈ ವರದಿಯೇ ಆಧಾರ ಆಗಿದೆ.

ಶ್ರೀ ಸಿ. ಬೈರೇಗೌಡ : ಈ ವರದಿಯ ಪುಟ 45ರಲ್ಲಿ ಕೆಲವರನ್ನು ಹೊರದೇಶಗಳಿಗೆ ತರಬೇತಿಗೆಂದು ಕಳಿಸಿದ್ದರ ಬಗ್ಗೆ ಏನು ಹೇಳಲಾಗಿದೆ ಎಂದರೆ:

Cost of Training During oral evidence on 16 th August 1988, the Company representative stated that after payment of one instalment it was found that this particular type of motor offered some design, lacuna, though later on AEG changed the design they wanted very high lumpsum payment and royalty for the revised design at the time when the collaboration for the revised design was sought and hence this was not pursued, at the time of original collaboration the appreciation was that orders from certain factories would flow in but they did not come true because competitors offered products with less electric energy consumption with long term saving..."

ಉಪಾಧ್ಯಕ್ಷರು : ಈಗ ಸಮಯ ಒಂದೂವರೆ ಗಂಟೆಯಾಗುತ್ತಿದೆ. ತಾವು ಸೋಮವಾರ ತಮ್ಮ ಭಾಷಣ ಮುಂದುವರೆಸಬಹುದು. ಈಗ ಖಾಸಗೀ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಸಿ. ಬೈರೇಗೌಡ : ಆಗಬಹುದು.

ಖಾಸಗಿ ಕಾರ್ಯಕಲಾಪಗಳು

ರಾಜ್ಯದಲ್ಲಿ ನಿಸರ್ಗ ಸಂಪತ್ತಾದ ಗ್ರಾನೈಟ್ ಕಲ್ಲುಗಳ ನಾಶ ತಪ್ಪಿಸಲು ಸಮಗ್ರ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸುವ ಬಗ್ಗೆ

ಉಪಾಧ್ಯಕ್ಷಿಣಿಯವರು: ಶ್ರೀಯುತ ವಾಟಾಳ್ ನಾಗರಾಜ್‌ರವರ ವಿಧೇಯಕದ ಬಗ್ಗೆ ಶ್ರೀಯುತ ವೆಂಕಟೇಶರವರು ಮಾತನಾಡುತ್ತಿದ್ದರು. ಈಗ ಅವರು ಇಲ್ಲ. ಈ ಮಧ್ಯದಲ್ಲಿ ಶ್ರೀಯುತ ಸಿಂಧ್ಯಾರವರು ಮಾತನಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ನಮ್ಮ ಗೌರವಾನ್ವಿತ ಸದಸ್ಯರಾದಗಿರಕ್ಕಂಥ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಖಾಸಗಿ ನಿರ್ಣಯವನ್ನು ಕಳುಹಿಸಿದ್ದಾರೆ. ಆ ಬಗ್ಗೆ ಹೇಳಬೇಕೆಂದರೆ ರಾಜ್ಯದ ಗಣಿ ಸಂಪತ್ತು ಆಗಿರತಕ್ಕಂಥ ಗ್ರಾನೈಟ್ ಕಲ್ಲುಗಳನ್ನು ರಾಷ್ಟ್ರೀಕರಣ ಮಾಡಬೇಕು ಇದರ ಲೂಟಿಯಾಗುತ್ತಿದೆ. ಇದು ವಿದೇಶಗಳಿಗೆ ಹೋಗುತ್ತಿದೆ ಮತ್ತು ಇದನ್ನು ನಿಲ್ಲಿಸಬೇಕು ಎನ್ನತಕ್ಕಂಥ ಪ್ರಯತ್ನವನ್ನು ನಾವು ಬಹಳವಾಗಿ ಮಾಡುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದೆವು. ಪ್ರಸ್ತಾಪ ಮಾಡಿ ಇತ್ತೀಚಿನ ದಿನಗಳಲ್ಲಿ ನಮ್ಮ ರಾಜ್ಯದಲ್ಲಿ ಈ ಗ್ರಾನೈಟ್ ಕಲ್ಲಿನ ವ್ಯವಹಾರ ಅಥವಾ ಅವ್ಯವಹಾರ ಜಾಸ್ತಿಯಾಗುತ್ತಿದೆ. ವಿದೇಶಗಳಿಗೆ ಅಕ್ರಮವಾಗಿ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರತಕ್ಕಂಥ ರಾಜಧನವನ್ನು ತಪ್ಪಿಸುತ್ತಿದ್ದಾರೆ ಇದರ ಬಗ್ಗೆ ನೀವು ನಿಗಾ ಇಡಬೇಕು ಎಂದು ಹೇಳಿ ಬಹುಶಃ ಆಡಳಿತ ಪಕ್ಷದ ಸದಸ್ಯರು ಬಹಳಷ್ಟು ಜನ ಹೇಳಿದ್ದಾರೆ. ನಾವು ವಿರೋಧ ಪಕ್ಷದ ಸದಸ್ಯರು ಆದರಲ್ಲಿಯೂ ನಾನು ಮತ್ತು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಒತ್ತಾಯಮಾಡಿ ಈ ವಿಚಾರವನ್ನು ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಈ ಬಗ್ಗೆ ನಮ್ಮ ಎಲ್ಲಾ ವಿರೋಧ ಪಕ್ಷಗಳ ನಾಯಕರುಗಳು ವಿರೋಧ ಪಕ್ಷದ ನಮ್ಮ ಈ ಸದನದ ನಾಯಕರಾದಂಥ ಚಂದ್ರೇಗೌಡರು ಮುಖ್ಯಮಂತ್ರಿಯವರಿಗೆ ಒಂದು ಪತ್ರವನ್ನು ನಾವೆಲ್ಲ ಸೇರಿ ಬರೆದೆವು. ಅದು ಏನೆಂದರೆ ಈ ಗ್ರಾನೈಟ್ ಕಲ್ಲಿನ ಬಗ್ಗೆ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಿಂತ